ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯೂನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 6 ಸಂಚಿಕೆ 27 ಜುಲೈ 1, 1984 ಬೆಲೆ 60 ಪೈಸೆ.

ಪಂಜಾಬ್ ಪರಿಸ್ಥಿತಿ ಇನ್ನೂ ಗಂಭೀರವಾಗಿದೆ

ಸಿಪಿಐ (ಎಂ) ಕೇಂದ್ರ ಸಮಿತಿಯ ನಿರ್ಣಯ

ಸ್ವರ್ಣ ಮಂದಿರದಿಂದ ಉಗ್ರಗಾಮಿಗಳನ್ನು ಹೊರಗೆ ಹಾಕಲು ಸಶಸ್ತ್ರ ಸೈನಿಕರ ಪ್ರವೇಶ ಮಾಡಬೇಕಾಗಿ ಬಂದನಂತರದ ಪರಿಸ್ಥಿತಿಯನ್ನು ವಿಮರ್ಶಿಸಿ ಕೇಂದ್ರ ಸಮಿತಿಯು ಪಂಜಾಬಿನಲ್ಲಿಯ ಪರಿಸ್ಥಿತಿ ಇನ್ನೂ ಗಂಭೀರವಾಗಿಯೇ ಮುಂದುವರಿದಿದೆಂದು ಎಚ್ಚರಿಸಿ ಎಲ್ಲಾ ಪ್ರಜಾಪ್ರಭುತ್ವವಾದಿ ಮತ್ತು ದೇಶಪ್ರೇಮಿ ಶಕ್ತಿಗಳೆಲ್ಲಾ ದೇಶದ ಐಕ್ಯತೆಯನ್ನು ಕಾಪಾಡಲು ಸಿದ್ಧರಾಗಿರಬೇಕೆಂದು ಕೇಳಿಕೊಂಡಿದೆ.

ಮತೀಯ ಭಾವನೆಗಳನ್ನೆಬ್ಬಿಸಿ ಹಲವಾರು ತಿಂಗಳು ಕೊಲೆ ಮತ್ತು ಭಯದ ವಾತಾವರಣ ಉಂಟುಮಾಡಿದ ಉಗ್ರಗಾಮಿಗಳ ವಿರುದ್ಧ–ಈ ಉಗ್ರಗಾಮಿಗಳು ವಿದೇಶೀ ಏಜೆಂಟರೊಡನೆ ಸಂಬಂಧವಿದ್ದವರೆಂಬ ಅಂಶ ಈಗ ಸ್ಪಷ್ಟವಾಗಿದೆ– ಕ್ರಮವನ್ನು ರಾಷ್ಟ್ರದ ಐಕ್ಯತೆಯ ರಕ್ಷಣೆಗಾಗಿ ಕೈಗೊಂಡ ಯೋಗ್ಯಕ್ರಮವೆಂದು ಸ್ವಾಗತಿಸಿದ್ದಾರೆ. ಮತ್ತು ಇದರಿಂದ ಸಮಸ್ಯೆ ಪರಿಹಾರವಾಯಿತೆಂದೂ ತಿಳಿದಿದ್ದಾರೆ.

ಸ್ವರ್ಣ ಮಂದಿರಕ್ಕೆ ಸೈನಿಕರ ಪ್ರವೇಶದಿಂದಾಗಿ ಸಿಖ್ ಜನತೆಯ ಮಂದಿರದ ಪಾವಿತ್ರ್ಯತೆಯನ್ನು ಉಲ್ಲಂಘಿಸಿದಂತಾಗಿದೆಂದು ತಿಳಿದಿರುವುದರಿಂದ, ಅವರನ್ನೆಲ್ಲ ದೂರ ಮಾಡಿದಂತಾಗಿದೆಂದೂ, ಅಸಮಾಧಾನ ಗೊಳಿಸಿದಂತಾಗಿದೆಂದೂ ಕೇಂದ್ರ ಸಮಿತಿ ಅಭಿಪ್ರಾಯ ಪಡುತ್ತದೆ.

ಆ ಕಾರಣದಿಂದಾಗಿ ಪಂಜಾಬ್ ಸಮಸ್ಯೆ ಮತ್ತಷ್ಟು ಉಲ್ಬಣಗೊಂಡಂತಾಗಿದೆ. ಈ ವಿಷಯವನ್ನು ಮರೆಯುವುದೆಂದರೆ ಭಯಾನಕವಾದ ಮತ್ತು ಅಕ್ಷಮ್ಯವಾದ ತಪ್ಪು ಮಾಡಿದಂತಾಗುತ್ತದೆ.

ಪಂಜಾಬಿನಲ್ಲಿ ಕೊಲೆ, ದೊಂಬಿಗಳು ನಡೆಯುತ್ತವೆಂಬ ಅತಿರೇಕತರ ವರದಿಗಳಿಂದಾಗಿ ಇತರ ರಾಜ್ಯಗಳಲ್ಲಿ ಕೂಡ ಪ್ರತ್ಯೇಕತೆಯ ಮನೋಭಾವ ಬೆಳೆದು ಬರುತ್ತಿದೆಂದು ಕೇಂದ್ರ ಸಮಿತಿ ತಿಳಿಯಪಡಿಸುತ್ತದೆ.

ಒಂದು ಘಟ್ಟದಲ್ಲಿ ಅಕಾಲಿ ಮುಖಂಡರಿಂದ ಒಪ್ಪಿಗೆ ಪಡೆದ ವಿರೋಧ ಪಕ್ಷಗಳ ಸಲಹೆಗಳನ್ನು ಕೇಂದ್ರದಲ್ಲಿರುವ ಕಾಂಗ್ರೆಸ್ ಸರಕಾರ ಒಪ್ಪಿಕೊಂಡಿದ್ದರೆ ಈ ಬೆಳವಣಿಗೆಗಳನ್ನು ತಪ್ಪಿಸಬಹುದಿತ್ತೆಂದೂ, ಹಾಗೆಯೇ ಪ್ರತ್ಯೇಕತಾ ಭಾವನೆಯಿಂದ, ಛಿದ್ರಕಾರಕ ಘಟನೆಗಳಿಂದ ಮನುಷ್ಯರಿಗಾದ ಹಾನಿಯಿಂದ ದೇಶವನ್ನು ತಪ್ಪಿಸಬಹುದಿತ್ತೆಂದೂ ಕೇಂದ್ರ ಸಮಿತಿ ಸ್ಪಷ್ಟ ಅಭಿಪ್ರಾಯ ಪಟ್ಟಿದೆ. ಆಳುವ ಪಕ್ಷಕ್ಕೆ ಚುನಾವಣೆಯಲ್ಲಿ, ಜಯಗಳಿಸಲು ಅನುಕೂಲವಾಗುವ ಉದ್ದೇಶದಿಂದ ಕೇಂದ್ರ ಸರಕಾರ ಹಿಂಜರಿತದ ಧೋರಣೆ ಅನುಸರಿಸಿತು. ಅದು ಉಗ್ರಗಾಮಿಗಳ ಹಸ್ತ ಬಲಗೊಳಿಸಲು ಸಹಾಯವಾಯಿತು. ನಿರ್ಣಯ ತೆಗೆದುಕೊಳ್ಳಲಿಕ್ಕೆ ಈ ರೀತಿ ತಡ ಮಾಡದಿದ್ದರೆ ಸ್ವರ್ಣ ಮಂದಿರದಲ್ಲಿ ಶಸ್ತ್ರಾಸ್ತ್ರಗಳನ್ನು ಶೇಖರಿಸಿಡಲು ಉಗ್ರಗಾಮಿಗಳಿಗೆ ಕಾಲಾವಕಾಶ ಸಿಗುತ್ತಿರಲಿಲ್ಲೆಂಬುದು ಈಗ ಸ್ಪಷ್ಟವಾಗಿದೆ.

ಸರಿಯಾದ ಸಮಯದಲ್ಲಿ ರಾಜಕೀಯ ಒಪ್ಪಂದ ಮಾಡಿಕೊಳ್ಳಲು ಕೇಂದ್ರ ಸರಕಾರ ತಪ್ಪಿದ್ದರಿಂದಲೇ ರಾಷ್ಟ್ರೀಯ ಐಕ್ಯತೆಗೆ ಭಂಗ ತರುವಂಥ ಇಂದಿನ ಪರಿಸ್ಥಿತಿಯನ್ನುಂಟು ಮಾಡಲು ಮುಖ್ಯ ಕಾರಣವಾಗಿದೆ.

ಸರಕಾರದ ಈ ತಪ್ಪನ್ನು ಉಗ್ರಗಾಮಿಗಳೂ, ವಿದೇಶಿ ಏಜಂಟರೂ ಪಂಜಾಬಿನಲ್ಲಿ ಗೊಂದಲ ಮತ್ತು ಗಲಾಟೆ ಉಂಟುಮಾಡಲು ಸಂಪೂರ್ಣ ಉಪಯೋಗ ಮಾಡಿಕೊಂಡಿದ್ದಾರೆ. ವಿದೇಶಿ ಏಜಂಟರು ತೀವ್ರಗಾಮಿಗಳ ಜೊತೆಯಲ್ಲಿದ್ದರೆಂಬುದಕ್ಕೆ ಸಂಶಯ ಉಳಿಯಲಿಲ್ಲ. ಉಗ್ರಗಾಮಿಗಳ ಚಟುವಟಿಕೆಗಳು ಮತ್ತು ಅವರ ಸಂಬಂಧಗಳ ಕುರಿತು ಒಂದು ಶ್ವೇತ ಪತ್ರ ಹೊರಡಿಸಬೇಕೆಂದು ನಮ್ಮ ಪಕ್ಷ ಹಾಗೆಯೇ ವಿರೋಧ ಪಕ್ಷಗಳೆಲ್ಲ ಪುನರಪಿ ಒತ್ತಾಯ ಪಡಿಸಿದರೂ ಕೂಡ, ವಿದೇಶಿಯರ ಕೈವಾಡವನ್ನು ಬಹಿರಂಗ ಗೊಳಿಸುವುದರಲ್ಲಿ ಸರಕಾರ ಸಂಪೂರ್ಣ ವಿಫಲಗೊಂಡಿದೆ. ಉಗ್ರಗಾಮಿಗಳ ತಪ್ಪುಗಳನ್ನು ಸಿಖ್ ಜನತೆಯ, ಸಿಖ್ ಧರ್ಮದ ಮೇಲೆ ಹೇರಿದರೆ, ಕ್ಷುಲ್ಲಕ ದೃಷ್ಟಿಯ ಮತ್ತು

(8ನೇ ಪುಟ ನೋಡಿ)

ಬೆಂಗಳೂರಿಗೆ ಸುರ್ಜಿತ್ ಸಿಂಗ್

ಸಿ.ಪಿ.ಐ.[ಎಂ]ನ ಪೋಲಿಟ್‌ಬ್ಯೂರೋ ಸದಸ್ಯರಾದ ಕಾ. ಹರ್‌ಕಿಶನ್ ಸಿಂಗ್ ಸುರ್ಜಿತ್ ಅವರು ಹಲವು ವರ್ಷಗಳ ನಂತರ ಜುಲೈ 11 ರಂದು ಬೆಂಗಳೂರಿಗೆ ಭೇಟಿ ನೀಡಲಿದ್ದಾರೆ. ಸಂಜೆ 6 ಗಂಟೆಗೆ ಟೌನ್‌ಹಾಲಿನಲ್ಲಿ ಏರ್ಪಡಿಸಿರುವ ಬಹಿರಂಗ ಸಭೆಯಲ್ಲಿ ಕಾ. ಸುರ್ಜಿತ್ ಅವರು ಪಂಜಾಬ್ ಪ್ರಶ್ನೆಗೆ ಸಂಬಂಧಿಸಿದಂತೆ ನಮ್ಮ ಪಕ್ಷವು ಅನುಸರಿಸಿದ ಧೋರಣೆ, ಪಂಜಾಬ್ ಬಿಕ್ಕಟ್ಟಿನಲ್ಲಿ ಕೇಂದ್ರಸರ್ಕಾರದ ಪಾತ್ರ, ಅಕ್ಷನ ಪ್ರಸಕ್ತ ವಿದ್ಯಮಾನಗಳ ಬಗ್ಗೆ ನಮ್ಮ ನಿಲುವುಗಳನ್ನು ವಿವರಿಸಲಿದ್ದಾರೆ. ನಗರದ ಸಂಗಾತಿಗಳು ಕಾರ್ಯಕ್ರಮದ ಕುರಿತು ವ್ಯಾಪಕ ಪ್ರಚಾರ ನಡೆಸಿ ಆದಷ್ಟು ಹೆಚ್ಚು ಸಾರ್ವಜನಿಕರು ಇದರಲ್ಲಿ ಭಾಗವಹಿಸುವಂತೆ ಮಾಡಬೇಕು. ಅಲ್ಲದೆ ನಗರದ ಸುತ್ತಮುತ್ತಲ ಪ್ರದೇಶಗಳ ಆಸಕ್ತ ಸಂಗಾತಿಗಳೂ ಇದರಲ್ಲಿ ಭಾಗವಹಿಸಿದರೆ ಉಪಯುಕ್ತವಾಗಬಹುದೆಂಬ ಅನಿಸಿಕೆ ನಮ್ಮದು.

ಸಂಪಾದಕೀಯ

ಅಪಾಯಕಾರಿ ಬೆಳವಣಿಗೆ

ಹಿಂದೂ ಮುಸಲ್ಮಾನರನ್ನೊಳಗೊಂಡು ಎಲ್ಲಾ ಜಾತಿಯವರೂ ಸೇರಿ ಬ್ರಿಟಿಷ್ ಸಾಮ್ರಾಜ್ಯಶಾಹಿಯ ವಿರುದ್ಧ ಹೋರಾಡಿದ್ದೇವೆ, ಗುಂಡಿಗೆ ತುತ್ತಾಗಿದ್ದೇವೆ, ಲಾಠಿಯೇಟು ತಿಂದಿದ್ದೇವೆ, ಜೈಲುವಾಸ ಅನುಭವಿಸಿದ್ದೇವೆ. ಬ್ರಿಟಿಷರ ಮತೀಯ ಶಕ್ತಿಗಳ ಪ್ರಚೋದನೆಯಿಂದ ಹಿಂದೂ–ಮುಸ್ಲಿಂ ದಂಗೆ ನಡೆಯುತ್ತಿದ್ದಂತೆಯೇ ಎಲ್ಲರೂ ಒಟ್ಟಾಗಿ ಸ್ವಾತಂತ್ರ್ಯ ಹೋರಾಟ ನಡೆಸಿದ್ದೆವು. ಬಹು ಸಂಖ್ಯೆ ಮುಸಲ್ಮಾನರಿರುವ ಪ್ರದೇಶವನ್ನು ಅವರಿಗೊಪ್ಪಿಸಿ, ಭಾರತ ದೇಶಕ್ಕೆ ಸ್ವಾತಂತ್ರ್ಯ ಪಡೆದೆವು.

ಬ್ರಿಟಿಷರ ಆಳ್ವಿಕೆಯಿಂದ ನಾವು ಸ್ವತಂತ್ರರಾದರೂ ಕೂಡ ಮತೀಯ, ಧಾರ್ಮಿಕ ಶಕ್ತಿಗಳ, ಅಂತವುಗಳ ವಿಚಾರ ಸರಣಿ, ಭಾವನೆಗಳಿಂದ ನಾವು ಸ್ವಾತಂತ್ರ್ಯ ಪಡೆಯಲಿಲ್ಲ. ಕಾರ್ಮಿಕ ವರ್ಗದ ಮುಖಂಡತ್ವದಲ್ಲಿ ಕ್ರಾಂತಿಯಾಗಿ ನಾವು ಸ್ವಾತಂತ್ರ್ಯ ಪಡೆಯುತ್ತಿದ್ದರೆ ಬ್ರಿಟಿಷರ ಆಳ್ವಿಕೆಯ ಜೊತೆಯಲ್ಲಿಯೇ ಹಳೆಯ ಮೂಢನಂಬಿಕೆ, ಭಾವನೆ, ಮತೀಯ, ಧರ್ಮೀಯ ಸಂಕುಚಿತ ತಿಳುವಳಿಕೆಗಳಿಗೂ ತಿಲಾಂಜಲಿಯಿತ್ತು, ಹೊಸ ಸಮಾಜವೊಂದನ್ನು ರಚಿಸಬಹುದಿತ್ತು. ಹಿರಿ ಬಂಡವಾಳಶಾಹಿ—ದೊಡ್ಡ ಭೂಮಾಲೀಕ ವರ್ಗದ ಕಾಂಗ್ರೆಸ್ ಪಕ್ಷಕ್ಕೆ ಬ್ರಿಟಿಷರು ಅಧಿಕಾರ ಹಸ್ತಾಂತರ ಮಾಡಿದ ಫಲವಾಗಿ ಸಮಾಜದಲ್ಲಿ, ಜನರಲ್ಲಿ, ದೇಶದಲ್ಲಿ, ಜಾತ್ಯಾತೀತ, ಸಮಾಜವನ್ನು, ಸುಲಿಗೆಗಳಿಂದ ಮುಕ್ತಗೊಂಡ ಸಮಾಜವನ್ನು ರಚಿಸಲು ಸಾಧ್ಯವಾಗಲಿಲ್ಲ. ತಮ್ಮ ವರ್ಗ ಹಿತರಕ್ಷಣೆಗಾಗಿ ಆಳುವ ಕಾಂಗ್ರೆಸ್ ಪಕ್ಷ ಎಲ್ಲ ತರದ ಜಾತಿ, ಮತ, ಧರ್ಮಗಳಿಗೆಲ್ಲ ಪ್ರೋತ್ಸಾಹ ನೀಡುತ್ತ, ಬೆಂಬಲ ತೋರಿಸುತ್ತ, ಬ್ರಿಟಿಷರ ಒಡೆದು ಆಳುವ ನೀತಿಯನ್ನೇ ಮುಂದುವರಿಸುತ್ತ, ಜಾತ್ಯಾತೀತ ರಾಷ್ಟ್ರವನ್ನು ಕಟ್ಟುವುದೇ ತಮ್ಮ ಗುರಿಯೆಂದು ಹೇಳುತ್ತ ಜನಕೋಟಿಗೆ ಮೋಸ ಮಾಡುತ್ತ ಬಂದಿದ್ದಾರೆ.

ಕಮ್ಯುನಿಸ್ಟ್ ಪಕ್ಷಗಳೂ, ಎಡಪಂಥೀಯ ವಿಚಾರದವರೆಲ್ಲ, ಮತೀಯ ಶಕ್ತಿಗಳ ವಿರುದ್ಧ ಹೋರಾಟ ಮಾಡುತ್ತ ಬಂದು ಜಾತಿಯ ಧರ್ಮೀಯ ಭಾವನೆಗಳನ್ನು, ದ್ವೇಷಗಳನ್ನು ತಡೆಯುತ್ತ ಬಂದರೂ ಕೂಡ, ವರ್ಗ ಸಂಘಟನೆ ವರ್ಗ ಹೋರಾಟದ ತಿಳುವಳಿಕೆ ಕೊಡುತ್ತಿದ್ದರೂ, ಕೂಡ ಅಪೇಕ್ಷಿಸಿದಷ್ಟು ಫಲ ಪಡೆಯಲು ಸಾಧ್ಯವಾಗಲಿಲ್ಲ. ಆದರೆ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ಬಲಿಷ್ಠವಾಗಿರುವ, ರೈತ, ಕಾರ್ಮಿಕರ, ವಿದ್ಯಾರ್ಥಿ, ಜನತೆಯು ಹಲವಾರು ಹೋರಾಟ ನಡೆಸುತ್ತ ಬಂದಿರುವ ಕೇರಳ, ಪಶ್ಚಿಮ ಬಂಗಾಲ, ತ್ರಿಪುರಗಳಲ್ಲಿ ಮತೀಯ ದಂಗೆಗಳಿಗೆ ಅವಕಾಶ ಸಿಗುತ್ತಿಲ್ಲವೆಂಬುದು ಮಾತ್ರ ಶ್ಲಾಘನೀಯ.

ಸ್ವಾತಂತ್ರ್ಯದ ಮೂವತ್ತಾರನೇ ವರ್ಷದಲ್ಲಿದ್ದೇವೆ. ಸತತವಾಗಿ ಕಾಂಗ್ರೆಸ್ ಪಕ್ಷವೇ (ಮಧ್ಯ 19 ತಿಂಗಳು ಬಿಟ್ಟು) ಅಧಿಕಾರ ನಡೆಸುತ್ತಾ ಬಂದಿದೆ. ಆದರೆ ದೇಶದಲ್ಲಿ ಜಾತೀಯ ವಾದಿಗಳ, ಛಿದ್ರಕಾರಿ ಶಕ್ತಿಗಳ ಮೇಲುಗೈ ಕಾಣುತ್ತಿದ್ದೇವೆ.

ಅಸ್ಸಾಂನಲ್ಲಿ ಅಮೇರಿಕನ್ ಸಾಮ್ರಾಜ್ಯಶಾಹಿಗಳ, ಕ್ರಿಶ್ಚಿಯನ್ ಮಿಶಿನರಿಗಳ ಪ್ರಚೋದನೆಯಿಂದಲೂ, ಪಂಜಾಬಿನಲ್ಲಿ ಅದೇ ಶಕ್ತಿಗಳ ಬೆಂಬಲದಿಂದಲೂ ಕೊಲೆ, ಸುಲಿಗೆಗಳು ನಡೆಯುತ್ತಿವೆ. ಅಸ್ಸಾಮಿ ಸಿಖ್ ಜನರಲ್ಲಿ ಪ್ರತ್ಯೇಕತಾ ಭಾವನೆಯನ್ನು ಆಳವಾಗಿ ಮೂಡಿಸುವಲ್ಲಿ ಆ ಶಕ್ತಿಗಳು ಯಶಸ್ವಿಯಾಗಿವೆ.

ಮುಂಬಯಿ, ಭೀವಂಡಿ ಗಳಲ್ಲೂ ಕರ್ನಾಟಕದ ಹುಬ್ಬಳ್ಳಿಯಲ್ಲೂ ಹಿಂದೂ ಮುಸ್ಲಿಂ ದಂಗೆ ನಡೆಯುತ್ತಿದೆ. ನಿರಪರಾಧಿಗಳ ಕೊಲೆಯಾಗುತ್ತಿದೆ, ಆಸ್ತಿ ಹಾನಿಯಾಗುತ್ತಿದೆ. ಈ ವಿಷಗಾಳಿ ದೇಶಾದ್ಯಂತ ಪ್ರಸರಿಸುವ ಸಂಭವವೂ ಕಾಣುತ್ತಿದೆ.

ದೇಶದ ಸಮಗ್ರತೆ, ಸಾರ್ವಭೌಮತ್ವದ ರಕ್ಷಣೆಗೆ ಇದು ಅತ್ಯಂತ ಅಪಾಯಕಾರಿ. ರಾಜಕೀಯವಾಗಿ ಇವುಗಳನ್ನೆಲ್ಲ ಎದುರಿಸಲು ಇಂದಿರಾ ಸರಕಾರ ತಯಾರಿಲ್ಲ. ತನ್ನೊಬ್ಬಳಿಂದಲೇ ದೇಶ ರಕ್ಷಿಸಲ್ಪಟ್ಟು, ಬಾಳಿ ಬದುಕಲು ಸಾಧ್ಯವೆಂಬುದನ್ನು ತೋರಿಸಿಕೊಡಲು ಇಂದಿರಾಗಾಂಧಿ ಬೇಕಾದ ಕುತಂತ್ರಗಳನ್ನು ನಡೆಸುತ್ತಿದ್ದಾರೆ. ಆ ನೀತಿಯಿಂದ ದೇಶಕ್ಕೆ ಖಂಡಿತವಾಗಿಯೂ ಅಪಾಯವಿದೆ. ಅಂಥ ಅಪಾಯದಿಂದ ದೇಶವನ್ನು ರಕ್ಷಿಸಲೇ ಬೇಕು.

ಆ ಜವಾಬ್ದಾರಿಯನ್ನು ಕಮ್ಯೂನಿಸ್ಟ್ ಪಕ್ಷಗಳು, ಎಡ ಪ್ರಜಾಪ್ರಭುತ್ವವಾದಿ ಶಕ್ತಿಗಳು, ಅವರು ಸಂಘಟಿಸಿರುವ ರೈತ ಕಾರ್ಮಿಕ, ವಿದ್ಯಾರ್ಥಿ ಯುವಜನ ಸಂಘಟನೆಗಳು ವಹಿಸಿಕೊಳ್ಳಬೇಕು. ಚರಿತ್ರಾರ್ಹವಾದ ಜವಾಬ್ದಾರಿ ಇದಾಗಿದೆ. ಇದನ್ನು ಪೂರೈಸಲಿಕ್ಕೆ ಎಲ್ಲರೂ ಮುಂದಾಗೋಣ.

ರಾಜ್ಯಪಾಲರೇ ವಾಪಸ್ ಹೋಗಿರಿ !

ಒಂದು ರಾಜ್ಯದ ಆಡಳಿತ ಸುಗಮವಾಗಿ ನಡೆಸಿಕೊಂಡು ಹೋಗಬೇಕಾದರೆ ರಾಜ್ಯಪಾಲರಿಗೂ, ಮಂತ್ರಿಮಂಡಲಕ್ಕೂ ಹೊಂದಾಣಿಕೆ ಇರುವುದು ಅತ್ಯಗತ್ಯ. ಸರ್ವಾಧಿಕಾರವೇ ತನ್ನ ಮೂಲ ಉದ್ದೇಶವಾಗಿಟ್ಟುಕೊಂಡಿರುವ ಇಂದಿರಾಗಾಂಧಿ ಕಾಂಗ್ರೆಯೇತರ ರಾಜ್ಯಗಳಲ್ಲಿ ಅಂಥ ಸರಕಾರಗಳ ವಿರುದ್ಧ ಪಿತೂರಿ ನಡೆಸುವಂಥ ರಾಜ್ಯಪಾಲರುಗಳನ್ನೇ ನೇಮಿಸುತ್ತಿರುವುದನ್ನು ಕಾಣುತ್ತಿದ್ದೇವೆ. ರಾಜ್ಯಪಾಲರನ್ನು ನೇಮಕ ಮಾಡುವ ಮುಂಚೆ ಆಯಾ ರಾಜ್ಯದ ಮುಖ್ಯಮಂತ್ರಿಯವರ ಅಭಿಪ್ರಾಯ ತಿಳಿದುಕೊಳ್ಳುವ ಪರಂಪರೆಯಿದ್ದರೂ, ಇಂದಿರಾಗಾಂಧಿ ಅದರಂತೆ ನಡೆಯುತ್ತಿಲ್ಲ. ಪಶ್ಚಿಮ ಬಂಗಾಲದ ಎಡರಂಗ ಸರಕಾರಕ್ಕೆ ತೊಂದರೆ ಉಂಟು ಮಾಡುವ ದೃಷ್ಟಿಯಿಂದ ಕಟ್ಟಾ ಕಾಂಗ್ರೆ ರಾಜಕಾರಣಿಗಳನ್ನೇ ರಾಜ್ಯಪಾಲರನ್ನಾಗಿ ನೇಮಿಸಲಾಗುತ್ತಿದೆ. ಈಗಿರುವ ರಾಜ್ಯಪಾಲರ ವರ್ತನೆಯಿಂದ ಬೇಸತ್ತ ಎಡರಂಗ ಸರಕಾರ ರಾಜ್ಯಪಾಲರ ಕಾರ್ಯಕ್ರಮಗಳನ್ನೆಲ್ಲ ಬಹಿಷ್ಕರಿಸಬೇಕೆಂದು ನಿರ್ಣಯ ಕೈಗೊಂಡು, ಯಾವ ಪರಂಪರೆಯನ್ನೂ ಅನುಸರಿಸದ ರಾಜ್ಯ ಪಾಲರನ್ನು ಕೂಡಲೇ ಹಿಂದೆ ಕರೆಸಿಕೊಳ್ಳಬೇಕೆಂದು ಕೇಂದ್ರವನ್ನು ಒತ್ತಾಯ ಮಾಡಿದೆ. ಮುಖ್ಯಮಂತ್ರಿ ಜ್ಯೋತಿ ಬಸು ಅವರು ಗವರ್ನರರ ವರ್ತನೆಯ ವಿರುದ್ಧ ತನ್ನ ಸರಕಾರ ಅವರಿಗೆ ಹಾಕಿದ ಬಹಿಷ್ಕಾರದ ಕುರಿತು ಇಂದಿರಾಗಾಂಧಿಯ ಗಮನ ಸೆಳೆದಿದ್ದಾರೆ.

ಕಟ್ಟಾ ಕಾಂಗ್ರೆಸ್ ರಾಜಕಾರಣಿ ಶರ್ಮಾ ಅವರನ್ನು ರಾಜ್ಯಪಾಲರನ್ನಾಗಿ ನೇಮಿಸಿದ ನಂತರ ರಾಜ್ಯ ಸರಕಾರದ ಶಿಫಾರಸನ್ನು ನಿರಾಕರಿಸಿ ಬದ್ರ್ವಾನ್ ಮತ್ತು ಕಲ್ಕತ್ತಾ ವಿಶ್ವವಿದ್ಯಾಲಯಗಳಿಗೆ ತನ್ನವರನ್ನೇ ವೈಸ್-ಚಾನ್ಸಲರನ್ನಾಗಿ ನೇಮಿಸಿ ಎಡರಂಗ ಸರಕಾರಕ್ಕೆ ಅಪಮಾನ ಗೈದಿದ್ದಾರೆ. ಅಷ್ಟೇ ಅಲ್ಲ, ವಿಧಾನಸಭೆಯಲ್ಲಿ ಮಂಜೂರಾದ ಕಲ್ಕತ್ತಾ ವಿಶ್ವವಿದ್ಯಾಲಯ ತಿದ್ದುಪಡಿ ಮಸೂದೆಗೆ ಬುದ್ಧಿಪೂರ್ವಕವಾಗಿ ಮಂಜೂರಾತಿ ಕೊಡದೆ, ಕೊನೆಗೆ ರಾಷ್ಟ್ರಾಧ್ಯಕ್ಷರ ಮಂಜೂರಿಗಾಗಿ ಕೇಂದ್ರಕ್ಕೆ ಕಳುಹಿಸಿದ್ದಾರೆ.

ಕಾಫೀ ಕ್ಯೂರಿಂಗ್ ಯಂತ್ರೀಕರಣವೇ ?

ಕಾಫಿ ಮಂಡಳಿಯ ಅಧ್ಯಕ್ಷರಾದ ಶ್ರೀಮಾನ್ ಎಸ್. ಕೆ. ವಾರಿಯರ್, ಕಾಫಿ ಸಂಸ್ಕರಣಾ ಉದ್ಯಮಿಗಳ ವಿಚಾರ ಸಂಕಿರಣವೊಂದರಲ್ಲಿ ಮಾತನಾಡುತ್ತಾ 1984-85 ನೇ ಸಾಲಿನಲ್ಲಿ ಕಾಫಿ ಉತ್ಪನ್ನವು ಹಿಂದಿನ ವರ್ಷದ ಉತ್ಪನ್ನದ ಎರಡರಷ್ಟಾಗುವ ನಿರೀಕ್ಷೆ ಇದೆಯೆಂದೂ, ಈಗಿರುವ ಯಂತ್ರಗಳಿಂದ ಸರಿಯಾದ ಸಮಯಕ್ಕೆ ಕಾಫಿ ಸಂಸ್ಕರಣ ಮಾಡಲು ಸಾಧ್ಯವಿಲ್ಲವೆಂದು ಹೇಳಿ ವಿದೇಶಗಳಲ್ಲಿ ಯಾವ ರೀತಿ ಆಧುನಿಕ ತಂತ್ರಜ್ಞಾನವನ್ನು ಉಪಯೋಗಿಸಿ ಕಡಿಮೆ ಸಮಯದಲ್ಲಿ ಹೆಚ್ಚು ಕಾಫಿಯನ್ನು ಸಂಸ್ಕರಿಸುತ್ತಿದ್ದಾರೆಂದು ಹೇಳಿದ್ದಾರೆ. ಆಧುನಿಕ ತಂತ್ರಜ್ಞಾನದ ವಿದೇಶಿ ಯಂತ್ರಗಳನ್ನು ಹೆಚ್ಚು ಹಣ ಖರ್ಚು ಮಾಡಿ ಅಳವಡಿಸಿದರೆ ವಿದ್ಯುಚ್ಛಕ್ತಿ ಬಳಕೆಯಲ್ಲಿ ಕಡಿತ, ಕಾರ್ಮಿಕರ ಸಂಖ್ಯೆಯನ್ನು ಕಡಿಮೆ ಮಾಡುವ ಮೂಲಕ ಕಾರ್ಮಿಕರ ಖರ್ಚನ್ನು ಉಳಿಸಬಹುದು, ಕಾಫಿ ಬೆಳೆಗಾರರಿಗೆ ಭರವಸೆ, ಕಾಫಿಯ ಗುಣಮಟ್ಟ ಹೆಚ್ಚಿಸಬಹುದೆಂದು ಹೇಳುವ ಮೂಲಕ ಕಾಫಿ ಮಂಡಳಿ ಅಧ್ಯಕ್ಷರು ವಿದೇಶಿ ಕಂಪನಿಗಳ ಏಜೆಂಟರಂತೆ ವರ್ತಿಸಿರುವುದು ಪತ್ರಿಕೆಗಳಲ್ಲಿ ಪ್ರಕಟವಾಗಿದೆ.

ನಮ್ಮ ದೇಶದಲ್ಲಿ ಈಗಾಗಲೇ ನಿರುದ್ಯೋಗವು ದೊಡ್ಡ ಸಮಸ್ಯೆಯಾಗಿದೆ. ಹಲವು ಕೈಗಾರಿಕೆಗಳಲ್ಲಿ ಈಗಾಗಲೇ ಯಾಂತ್ರೀಕರಣ, ಗಣಕೀಕರಣಗಳ ಮೂಲಕ ಕಾರ್ಮಿಕರ ಸಂಖ್ಯೆಯನ್ನು ಕಡಿಮೆ ಮಾಡಿ ಸಾವಿರಾರು ಕಾರ್ಮಿಕರನ್ನು ನಿರುದ್ಯೋಗದ ದವಡೆಗೆ ತಳ್ಳಿರುವುದು ಕಾಣುತ್ತಿದ್ದೇವೆ. ಕಾಫಿ ಕ್ಯೂರಿಂಗ್‌ಗಳಲ್ಲಿ ಪಟ್ಟಣದ ಹಾಗೂ ಹಳ್ಳಿಯ ದುರ್ಬಲ ವರ್ಗದ ಮಹಿಳೆಯರೇ ಹೆಚ್ಚಾಗಿ ದುಡಿಯುವವರಾಗಿದ್ದಾರೆ. ಹೆಚ್ಚು ಕಾಫಿ ಉತ್ಪಾದನೆಯಾದಾಗ ಹೆಚ್ಚು ಕಾರ್ಮಿಕರಿಗೆ ಉದ್ಯೋಗ ಸಿಗಬೇಕಾದದ್ದು ಸಹಜ, ಅದು ಬಿಟ್ಟು ಆಧುನಿಕ ಯಂತ್ರಗಳನ್ನು ಅಳವಡಿಸಿ ಕಾರ್ಮಿಕರ ಸಂಖ್ಯೆಯನ್ನು ಕಡಿಮೆ ಮಾಡುವುದು ಸ್ವಲ್ಪವೂ ಸರಿಯಲ್ಲ. ಆದ್ದರಿಂದ ಕಾಫಿ ಮಂಡಳಿ ಅಧ್ಯಕ್ಷರು ಕಾಫಿ ಸಂಸ್ಕರಣಾ ಉದ್ಯಮಿಗಳಿಗೆ ಕೊಟ್ಟಿರುವ ಮೇಲ್ಕಂಡ ಸಲಹೆಯನ್ನು ನಾವು ತೀವ್ರವಾಗಿ ವಿರೋಧಿಸುತ್ತೇವೆ.

ಕಾಫಿ ಮಂಡಳಿಯ ಅಧ್ಯಕ್ಷರು ವಿದೇಶಿ ಕಂಪನಿಗಳ ಏಜೆಂಟರಂತೆ ವರ್ತಿಸುವುದು ನಿಲ್ಲಬೇಕು. ಕಾಫಿ ಮಂಡಳಿ ಅಧ್ಯಕ್ಷರ ಸಲಹೆಯಂತೆ ಆಧುನಿಕ ಯಂತ್ರಗಳನ್ನು ಅಳವಡಿಸಿ ದುರ್ಬಲ ವರ್ಗದ ಕಾರ್ಮಿಕರನ್ನು ನಿರುದ್ಯೋಗದ ದವಡೆಗೆ ತಳ್ಳಿ ನಿರ್ಗತಿಕರನ್ನಾಗಿ ಮಾಡುವ ಬದಲು ಆಧುನಿಕ ಯಂತ್ರಗಳಿಗೋಸ್ಕರ ಉಪಯೋಗಿಸುವ ಹಣದಿಂದ ಹೆಚ್ಚು ಹೆಚ್ಚು ಕಾಫಿಯನ್ನು ಶೇಖರಿಸಲು ಮತ್ತು ಹೆಚ್ಚು ಹೆಚ್ಚು ಕಾರ್ಮಿಕರನ್ನು ಸೇರಿಸಿ ಕಾಫಿಯನ್ನು ಶುದ್ಧವಾಗಿ ಸಂಸ್ಕರಿಸುವ ಮೂಲಕ ಹೆಚ್ಚು ಕಾರ್ಮಿಕರಿಗೆ ಉದ್ಯೋಗ ಕೊಡಲು ಮುಂದಾಗಬೇಕೆಂದು ನಾವು ಕಾಫಿ ಸಂಸ್ಕರಣಾ ಉದ್ಯಮಿಗಳನ್ನು ಕೇಳಿಕೊಳ್ಳುತ್ತೇವೆ. ಅದೇ ಸಮಯದಲ್ಲಿ ಆಧುನಿಕ ಯಂತ್ರಗಳನ್ನು ಬಳಸಲು ಪ್ರಯತ್ನಿಸಿದರೆ ತೀವ್ರ ರೀತಿಯ ಹೋರಾಟಕ್ಕೆ ಕಾರ್ಮಿಕರನ್ನು ಸಂಘಟಿಸಬೇಕಾಗುತ್ತದೆಂಬ ಎಚ್ಚರಿಕೆಯನ್ನೂ ಕೊಡಬಯಸುತ್ತೇವೆ.

ವಿ. ಸುಕುಮಾರ್
ಪ್ರಧಾನ ಕಾರ್ಯದರ್ಶಿ
ಕಾಫಿ ಕ್ಯೂರಿಂಗ್, ಸಾಮಿಲ್ಸ್ ಮತ್ತು ಇತರ ಕಾರ್ಮಿಕರ ಸಂಘ

ಹರಿಹರ

ಕೈಗಾರಿಕಾ ಕಾರ್ಮಿಕರ ಸಮಾವೇಶ

ತಾರೀಖು 17-6-1984 ರಂದು ಹರಿಹರ ಸುತ್ತಮುತ್ತಲಿನ ಕೈಗಾರಿಕೆಯಲ್ಲಿಯ ಸಿ.ಐ.ಟಿ.ಯು ಕಾರ್ಯಕರ್ತರ ಒಂದು ದಿನದ ಸಮಾವೇಶ ಹರಿಹರದಲ್ಲಿ ನಡೆಯಿತು. ಸಮಾವೇಶದಲ್ಲಿ 200 ಜನ ಕಾರ್ಯಕರ್ತರು ಭಾಗವಹಿಸಿದ್ದರು. ರಾಜ್ಯ ಸಿ.ಐ.ಟಿ.ಯು. ಪ್ರಧಾನ ಕಾರ್ಯದರ್ಶಿ ಕಾಂ.ಸಿ.ನಂಜುಂಡಪ್ಪ ಸಮಾವೇಶ ಉದ್ಘಾಟಿಸಿ ಮಾತನಾಡಿದರು. ಸಮಿತಿಯ ಸಂಚಾಲಕ ಕಾಂ.ಜಂಗಡಿಯವರಿಂದ "ವರದಿ" ಮಂಡನೆ ಸಿ.ಐ.ಟಿ.ಯು. ವಿನ ಬಲಿಷ್ಠವಾದ ಸಂಘಟನೆ ಕಟ್ಟುವ, ರಾಣೇಬೆನ್ನೂರು ತಾಲ್ಲೂಕಿನಲ್ಲಿರುವ ಅಗ್ರೋ ಇನ್‌ಪುಟ್ಸ್, ಬೋರ್ಡ್ಸ್ ಕಾರ್ಖಾನೆ ಕಾರ್ಮಿಕರ ಹೋರಾಟಕ್ಕೆ ಬೆಂಬಲ ಸೂಚಿಸುವ ಎ.ಐ.ಟಿ.ಯು.ಸಿ.ಯವರ ಗೂಂಡಾಗಿರಿಯನ್ನು ವಿರೋಧಿಸುವ ಕ್ರಮ, ಹರಿಹರ ನಗರ ಸಭೆಯವರ ನಾಗರೀಕ ಸೌಲಭ್ಯಗಳನ್ನು ಒದಗಿಸುವಲ್ಲಿ ವಿಫಲವಾಗಿರುವುದರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕೆನ್ನುವ ನಿರ್ಣಯಗಳು ಪಾಸಾದವು. ಸಮಾರೋಪ ಭಾಷಣದಲ್ಲಿ ವಿ.ಜೆ.ಕೆ. ನಾಯರ್ ರವರು ತಮ್ಮ ಭಾಷಣದಲ್ಲಿ ಅಂತರರಾಷ್ಟ್ರೀಯ ಕಾರ್ಮಿಕ ಚಳುವಳಿಯ ಸಾಹಸ, ನಮ್ಮ ದೇಶದಲ್ಲಿಯ ಕಾರ್ಮಿಕ ಸಂಘಟನೆಗಳು ಸಿ.ಐ.ಟಿ.ಯು. ವಿನ ಧೋರಣೆ,ಐಕ್ಯ ಹೋರಾಟಗಳನ್ನು ಸಂಘಟಿಸುವದು ಕಾರ್ಯಕರ್ತರು ಮಾಡಬೇಕಾದ ಕರ್ತವ್ಯಗಳು ಮತ್ತು ಎ.ಐ.ಟಿ.ಯು.ಸಿ. ಯವರ ವರ್ಗ ಸಹಕಾರದ ಬಲಹೀನತೆ, ಗೂಂಡಾಗಿರಿಯನ್ನು ವಿವರಿಸಿದರು.

ಹರಿಹರ ಪ್ರದೇಶದಲ್ಲಿ ಸಿ.ಐ.ಟಿ.ಯು. ಸಂಘಟನೆಯನ್ನು ಬೆಳೆಸಲು ಭದ್ರಗೊಳಿಸಲು ಈ ಸಮಾವೇಶ ಸಹಾಯವಾಗಬಹುದು.

.... ಕೆಂಡಗಳ ಮೇಲೆ ಪಂಜಾಬ್

"ಚಿನ್ನದ ಗುಡಿ" ಗೆ ಲಗ್ಗೆ ಹಾಕಿ
ಯದ್ವಾ ತದ್ವಾ 'ಯುದ್ಧ' ಮಾಡಿದ ಸೈನಿಕರು
ಈಗ ವಿಶ್ರಮಿಸಿಕೊಳ್ಳುತ್ತಿದ್ದಾರೆ

ಒಂದಷ್ಟು ಜರ್ನಲಿಸ್ಟುಗಳನ್ನು
ಜರಡಿ ಹಿಡಿದು ಕೊಂದ
ಜರ್ನಲ್‌ಸಿಂಗ್ ಭಿಂದ್ರನ್‌ವಾಲೆ ಈಗಿಲ್ಲ

ದೇಶವನ್ನೇ ನಡುಗಿಸಿದ ಭಯೋತ್ಪಾದಕರು
ಪ್ರಾಣಗಳ ಹಾರಿಸಿದ 'ಬೈಕ್' ವಾಲಾಗಳು
ಈಗ ಜೈಲುಗಳಲ್ಲಿದ್ದಾರೆ

ಸುವರ್ಣ ಮಂದಿರದ
ಸುರಂಗ, ಸಂದಿಗೊಂದಿಗಳಲ್ಲಿ
ಅಡಗಿದ್ದ ಹಾವು, ಚೇಳು, ಮುಗ್ಧ ಜನರ ರಕ್ತ ಹೀರಿದ
ಆಕ್ಟೋಪಸ್ಸುಗಳು ಈಗ ಮರೆಯಾಗಿವೆ

ಕ್ಷಿಪಣಿಗಳು, ಬಂದೂಕು, ಪಿಸ್ತೂಲು
ಬಾಂಬ್, ಡೈನಾಮೈಟುಗಳು
ಭರ್ಜಿ,ಚಾಕು, ಚೂರಿಗಳು ಹೊರ ಬಂದು
ಫೋಟೋ ತೆಗೆಸಿಕೊಳ್ಳುತ್ತಿವೆ

ಆದರೆ ಸ್ವಾಮಿ,
ಪಂಜಾಬು ಇನ್ನೂ ಕೆಂಡಗಳ ಮೇಲಿದೆ
ಬಹುಶಃ ಈ ದೇಶದ ಹವಾಮಾನ
ಇದನ್ನು ಆರಲು ಬಿಡಲಾರದೇನೋ

ಉಗ್ರವಾದಿಗಳಿಗೆ ಜನ್ಮ ಕೊಟ್ಟು
ಪಂಜಾಬನ್ನು ಉರಿಗೆ ತಳ್ಳಿದ
ಸರ್ಕಾರ ಮತ್ತವರ ಗೋಬೆಲ್ಸರು ಮಾತ್ರ
ಟಿ.ವಿ. ಪೇಪರು, ರೇಡಿಯೋಗಳಲ್ಲಿ
"ಇದು ಅನಿವಾರ್ಯವಾಗಿತ್ತು"
"ಇದು ಅನಿವಾರ್ಯವಾಗಿತ್ತು"
ಎಂದು ಹೇಳಿ ಹೇಳಿ
ಬೆತ್ತಲಾಗುತ್ತಿದ್ದಾರೆ

'ಉದಯ'

ಕೃಷಿ ಉತ್ಪನ್ನ ಬೆಲೆ ನಿಗದಿ ಸಮಿತಿಗೆ ಮನವಿ

(ಕೃಷಿ ಉತ್ಪನ್ನ ಬೆಲೆ ನಿಗದಿ ಸಮಿತಿಗೆ ತುಮಕೂರು ಜಿಲ್ಲಾ ರೈತ ಸಂಘ ಅರ್ಪಿಸಿದ ಮನವಿ)

ಈ ಆಯೋಗವನ್ನು ರಾಜ್ಯ ಸರ್ಕಾರ ರಚಿಸಿರುವುದು 37 ವರ್ಷಗಳ ಸ್ವಾತಂತ್ರ್ಯ ನಂತರದ ಮಹತ್ತರ ಅಂಶವಾಗಿದೆ. ನಮ್ಮ ಜಿಲ್ಲೆಯಲ್ಲಿ ಮತ್ತು ದೇಶದಲ್ಲಿ ಸಹ ಕೃಷಿ ಉತ್ಪನ್ನಗಳಿಗೆ ಸರಿಯಾದ ಬೆಲೆ ಸಿಗದೆ ರೈತನ ಸ್ಥಿತಿ ಭಿಕ್ಷುಕರ ಸ್ಥಿತಿಗೆ ಇಳಿಯುವಂತಾಗಿದೆ. ಭೂಗುಣ ವಾಯುಗುಣ ಸೂರ್ಯ ಪ್ರಕಾಶ ಇವುಗಳೆಲ್ಲಾ ವ್ಯವಸಾಯಕ್ಕೆ ತುಂಬಾ ಅನುಕೂಲಕರವಾಗಿದ್ದರೂ ಸಹ ಭೂಮಿಯ ಸಮೇತ ಗಾಳಿ ಮತ್ತು ಪ್ರವಾಹದಿಂದ ಕೊಚ್ಚಿಹೋಗಿ ಸಹಸ್ರಾರು ವರ್ಷಗಳ ವ್ಯವಸಾಯದಿಂದ ತುಂಬಾ ಶೋಷಣೆಗೆ ಒಳಗಾಗಿ ಫಲವತ್ತತೆ ಕಡಿಮೆಯಾಗುತ್ತಾ ಬರುತ್ತಿದೆ.

ರೈತ ಉಪಯೋಗಿಸುವ ದೇಶೀಯ ಯಂತ್ರ ಮತ್ತು ಉಪಕರಣಗಳು ವಿದೇಶೀಯ ಯಂತ್ರ ಉಪಕರಣಗಳಿಗಿಂತ ಶೇ 40 ರಷ್ಟು ಹೆಚ್ಚು ಬೆಲೆ ಉಳ್ಳದಾಗಿದ್ದು ಬಾಳಿಕೆಯಲ್ಲಿ ಶೇ 50 ರಷ್ಟು ಕಡಿಮೆಯಾಗಿ ಶೇ 40 ರಷ್ಟು ಇಂಧನವನ್ನು ಹೆಚ್ಚಾಗಿ ಕುಡಿಯುತ್ತಿವೆ. ಇಂತಹದ್ದಕ್ಕೆಲ್ಲಾ ಮತ್ತು ಇತರ ಉದ್ಯೋಗಿಕ ಸಾಮಗ್ರಿಗಳಿಗೆ ಇಂಡಿಯಾ ಸರ್ಕಾರದ ತಾರೀಫ್ ಕಮಿಷನನ್ನಿನ ರಕ್ಷಣೆ ಇದೆ. ಕಳೆದ 12 ವರ್ಷಗಳಲ್ಲಿ ಈ ಔದ್ಯೋಗಿಕ ಸಾಮಾನಿದ ಬೆಲೆ ಒಂದಕ್ಕೆ 10 ರಷ್ಟು ಜಾಸ್ತಿಯಾಗಿದ್ದರೆ ವ್ಯವಸಾಯ ಉತ್ಪನ್ನಗಳ ಬೆಲೆ ಕೇವಲ ಒಂದಕ್ಕೆ ಮೂರರಷ್ಟು ಮಾತ್ರ ಜಾಸ್ತಿಯಾಗಿದೆ. ರೈತರಿಂದ ಕೆಜಿ ಒಂದಕ್ಕೆ 50 ಪೈಸೆ ಎಂದು ಕೊಂಡ ನೀಲಗಿರಿ ವಗೈರೆ ಆಸಿದ್ದ ಮರಗಳು ತಯಾರಿಕ ವಸ್ತುವಾಗಿ ಕೆಜಿ ಒಂದಕ್ಕೆ ನೂರು ಇನ್ನೂರು ರೂಗಳಿಗೆ ಮಾರಾಟವಾಗುತ್ತಿದೆ. ಕೆಜಿ ಒಂದಕ್ಕೆ 5 ರೂಗಳಂತೆ ಕೊಂಡ ಹತ್ತಿ ಬಟ್ಟೆ

(7ನೇ ಪುಟ ನೋಡಿ)

ಪಂಜಾಬ್ ಬಿಕ್ಕಟ್ಟಿನ ಏರಿಳಿವುಗಳು ಹಾಗೂ ತಿರುವುಗಳು

— ಹರ್‌ಕಿಷನ್ ಸಿಂಗ್ ಸುರಜಿತ್

ಅನು : ಅಶೋಕ ಶೆಟ್ಟರ್

ಈ ವಿವರವಾದ ವಿಶ್ಲೇಷಣೆಯಲ್ಲಿ ಸಿ. ಪಿ. ಐ. (ಎಂ) ಧುರೀಣ ಹರ್‌ಕಿಷನ್‌ಸಿಂಗ್‌ಸುರಜೀತ್ ಅವರು ಜೂನ್ 6 ರ ಸೈನ್ಯ ಕಾರ್ಯಾಚರಣೆಯಲ್ಲಿ ಪರ್ಯಾವಸಾನಗೊಂಡ ಪಂಜಾಬ್ ಬಿಕ್ಕಟ್ಟಿನ ಹಿನ್ನೆಲೆಯನ್ನು ಅವಲೋಕಿಸುತ್ತ ಆ ರಾಜ್ಯದಲ್ಲಿಯ ಉಗ್ರವಾದ ಹಾಗೂ ಭಯೋತ್ಪಾದಕ ಚಟುವಟಿಕೆಗಳ ಸ್ವರೂಪ, ಅಕಾಲಿ ಧುರೀಣತ್ವದ ಕಾರ್ಯಸಾಧನೆ, ಸರಕಾರದ ಹೊಣೆಗಾರಿಕೆ ಹಾಗೂ ಸಧ್ಯದ ಕರ್ತವ್ಯವೇನು ಎಂಬುದರ ಬಗ್ಗೆ ತಮ್ಮ ತೀರ್ಮಾನಗಳನ್ನು ವ್ಯಕ್ತಗೊಳಿಸಿದ್ದಾರೆ.

ಪಂಜಾಬಿನಲ್ಲಿ ನಡೆಯುತ್ತಿರುವ ವಿದ್ಯಮಾನಗಳು ಈ ದೇಶದ ಪ್ರತಿಯೊಬ್ಬನನ್ನು ಚಿಂತಿತಗೊಳಿಸುವಂಥವು. ಕೇಂದ್ರ ಸರಕಾರದ ಕುರಿತು ಆಳವಾದ ಕೋಪ ಹಾಗೂ ಅಸಮಾಧಾನ ಇಂದು ಸಿಖ್ ಜನಸಮುದಾಯದಲ್ಲಿ ಉಂಟಾಗಿದೆ. ಗಣನೀಯ ಸಂಖ್ಯೆಯಲ್ಲಿ ಭಯೋತ್ಪಾದಕರು ನಿರ್ನಾಮಗೊಳಿಸಲ್ಪಟ್ಟ ಇಲ್ಲವೆ ಸರಕಾರದ ಕೈವಶವಾದ ಹಿನ್ನೆಲೆಯಲ್ಲೂ ಸಿಖ್ ಜನಸಮುದಾಯದಲ್ಲುಂಟಾದ ಈ ಕೋಪ ಹಾಗೂ ಅಸಮಾಧಾನದ ಪರಿಣಾಮವಾಗಿ ಉಗ್ರ ವಾದದ ತಾತ್ವಿಕ ತಳಹದಿ ವಿಸ್ತೃತಗೊಳ್ಳುತ್ತಿದೆ. ಸೌಮ್ಯವಾದಿ ಅಕಾಲಿ ಧುರೀಣತ್ವ ಪ್ರತ್ಯೇಕಿತಗೊಂಡಿದ್ದು ಇಂದು ಯಾವುದೇ ಸಂವಿಧಾನದ ಮಾತುಕತೆಯಲ್ಲಿ ಭಾಗವಹಿಸುವ ಸ್ಥಿತಿಯಲ್ಲಿಲ್ಲ. ಹಿಂದೂ-ಸಿಖ್ ವಿಭಾಗೀಯ ಭಾವನೆಗಳು ಮತ್ತಷ್ಟು ಉಲ್ಬಣಗೊಂಡಿವೆ. ಪಾಕಿಸ್ತಾನಕ್ಕೆ ಹೊಂದಿಕೊಂಡಿರುವ ಈ ರಾಜ್ಯದಲ್ಲಿಯ ಸ್ಥಿತಿ ಅತ್ಯಂತ ಗಂಭೀರವೂ ಆತಂಕವೂ ಆಗಿದೆಯೆಂಬುದು ಸ್ಪಷ್ಟ. ರಾಷ್ಟ್ರದ ಒಗ್ಗಟ್ಟು ಹಾಗೂ ಭಾವೈಕ್ಯತೆಯನ್ನು ಛಿದ್ರಗೊಳಿಸಬಯಸುವ ಶಕ್ತಿಗಳಿಗೆ ಅನುಕೂಲಕರವಾದಂಥ ಸ್ಥಿತಿ ಇದಾಗಿದೆ.

ಉಗ್ರಗಾಮಿಗಳ ನೆಲೆ ವಿಸ್ತರಣೆ

ಪಂಜಾಬಿನಲ್ಲಿಯ ಇತ್ತೀಚಿನ ಬೆಳವಣಿಗೆಗಳ ಕುರಿತು ಮುಖ್ಯವಾಗಿ ಮೂರು ಬಗೆಯ ಪ್ರತಿಕ್ರಿಯೆಗಳು ಕಂಡುಬರುತ್ತಿವೆ. ಸ್ವರ್ಣಮಂದಿರದಿಂದ ಭಯೋತ್ಪಾದಕರನ್ನು ಹೊರಗೆಳೆದ ಕುರಿತು ಕೆಲವರು ಸಮಾಧಾನದ ಉಸಿರೆಳೆದರೆ ಇನ್ನು ಕೆಲವರು ಈ ವಿದ್ಯಮಾನಗಳನ್ನು ದುರಂತಮಯ ಆದರೆ ಅನಿವಾರ್ಯ ಎಂದು ವರ್ಣಿಸಿದ್ದಾರೆ. ಸಿಖ್ ಜನತೆಯ ಕುರಿತು ಹೇಳಬೇಕೆಂದರೆ ಅವರ ಒಟ್ಟಾರೆ ಭಾವನೆಗಳು ಆಘಾತಗೊಂಡಿವೆ.

ವಾಸ್ತವವಾಗಿ ಸ್ವರ್ಣಮಂದಿರದಲ್ಲಿ ಸೈನ್ಯ ಕಾರ್ಯಾಚರಣೆಗೆ ಸಂಬಂಧಿಸಿದಂತೆ ಸಿಖ್ ಜನತೆಯಲ್ಲಿ ಉಗ್ರವಾದಿ ಮತ್ತು ಸೌಮ್ಯವಾದಿಗಳ ಮಧ್ಯೆ ಭಿನ್ನಾಭಿಪ್ರಾಯವಿದ್ದಂತೆ ತೋರುವುದಿಲ್ಲ. ಪಂಜಾಬ್ ಮತ್ತು ದೇಶದ ಇನ್ನಿತರ ರಾಜ್ಯಗಳಲ್ಲಿ ಮಾತ್ರವಲ್ಲದೆ ಜಗತ್ತಿನ ಉದ್ದಗಲಕ್ಕೆ ತಾವು ವಾಸಿಸುತ್ತಿರುವಲ್ಲೆಲ್ಲ ಅವರು ವಿವಿಧ ಬಗೆಯಲ್ಲಿ ತಮ್ಮ ವೇದನೆ ಹಾಗೂ ಪ್ರತಿಭಟನೆಯನ್ನು ವ್ಯಕ್ತಪಡಿಸುತ್ತಿದ್ದಾರೆ. ಪ್ರತಿಬಂಧಕಾಜ್ಞೆಯ ಪರಿಸ್ಥಿತಿಯಿಂದಾಗಿ ಪಂಜಾಬಿನಲ್ಲಿನ ಅವರ ಭಾವನೆಗಳನ್ನು ಗುರುತಿಸುವುದು ಪ್ರಯಾಸಕರವಾಗಿದ್ದರೂ ಇನ್ನುಳಿದ ರಾಜ್ಯಗಳಲ್ಲಿಯ ಅವರ ಪ್ರತಿಭಟನಾ ಪ್ರದರ್ಶನಗಳು ಅವರ ವೇದನೆಯನ್ನು ಪ್ರತಿಬಿಂಬಿಸುತ್ತವೆ.

ಹೀಗೆ ಪ್ರತಿಭಟಿಸುತ್ತಿರುವ ಎಲ್ಲರನ್ನೂ ಉಗ್ರವಾದಿಗಳ ಬೆಂಬಲಿಗರೆಂದು ಕರೆದುಬಿಡುವುದು ಅನ್ಯಾಯವಾದೀತು. ಅತ್ಯಾಧುನಿಕ ಆಯುಧಗಳನ್ನು ಸಂಗ್ರಹಿಸಿ ಪವಿತ್ರ ಸ್ಥಳವನ್ನು ಶಸ್ತ್ರಾಗಾರವಾಗಿ ಪರಿವರ್ತಿಸಿದ ಉಗ್ರವಾದಿಗಳ ಪ್ರಯತ್ನ ಬೆಳಕಿಗೆ ಬಂದಾಗ್ಯೂ ಸಿಖ್ ಜನಸಮುದಾಯದಲ್ಲಿ ಒಟ್ಟಾರೆ ಅಸಮಾಧಾನ ತುಂಬಿಕೊಂಡಿದೆಯೆಂಬುದನ್ನು ಕೆಲವು ಪತ್ರಿಕೆಗಳು ಗುರುತಿಸಿವೆ. ಸೈನ್ಯವು ಸ್ವರ್ಣಮಂದಿರ ಸಮುಚ್ಚಯವನ್ನು ಪ್ರವೇಶಿಸಿತೆಂಬ ವಿಚಾರ ಮಾತ್ರವೇ ಅವರ ಧಾರ್ಮಿಕ ಭಾವನೆಗಳನ್ನು ಆಘಾತಗೊಳಿಸಿದೆ. ಇದರಿಂದಾಗಿ ಮತೀಯ ಭಿನ್ನತೆ ಹೆಚ್ಚು ಉತ್ಕಟಗೊಂಡಿದ್ದು ಅವರ ಮನಸ್ಸಿನಲ್ಲಿ ದ್ವೇಷ ವ್ಯಾಪಿಸುತ್ತಿದೆ. ಅಂಥ ಬೆಳವಣಿಗೆ ಸಾಮ್ರಾಜ್ಯಶಾಹಿಗಳಿಗೂ, ತೀವ್ರವಾದಿಗಳಿಗೂ ಅನುಕೂಲವಾಗುತ್ತಿದೆ.

ವಾಸ್ತವವಾಗಿ ಭಯೋತ್ಪಾದಕರು ಬಹುಸಂಖ್ಯೆಯಲ್ಲಿ ನಾಶವಾಗಿದ್ದರೂ ಉಗ್ರವಾದದ ಸೈದ್ಧಾಂತಿಕ ನೆಲೆ ಮತ್ತಷ್ಟು ವಿಶಾಲಗೊಂಡಿದೆ. ಅಕಾಲಿದಳದ ಅಧಿಕೃತ ಧುರೀಣತ್ವ ಪ್ರತ್ಯೇಕಗೊಂಡಿದೆ. ಸಂಧಾನ ನಡೆಸುವ ಸ್ಥಿತಿಯಲ್ಲಿ ಯಾರೂ ಇಲ್ಲ. ಸೌಮ್ಯವಾದಿ ಮುಖಂಡ ಶ್ರೀ ಸುರಜೀತ್ ಸಿಂಗ್ ಬರ್ನಾಲ ಅವರಿಗೆ ಚಂಡಿಗಢ್‌ನಲ್ಲಿಯ ಗುರುದ್ವಾರವೊಂದರಲ್ಲಿ ಮಾತನಾಡಲು ಅವಕಾಶ ಕೊಡಲಿಲ್ಲ.

ಸಿಪಿಐ (ಎಂ) ನಿಲುವು

ಅಮೃತಸರ ಮತ್ತು ಪಂಜಾಬಿನ ಇತರೆಡೆಗಳಲ್ಲಿ ಜೂನ್ 6 ರಂದು ಘಟಿಸಿದ ಘಟನೆಗಳ ಕುರಿತು ನಮ್ಮ ಪಕ್ಷ ಜೂನ್ 7 ರಂದು ಪ್ರಕಟಣೆಯ ಮೂಲಕ ಅತೀವ ವೇದನೆಯನ್ನು ವ್ಯಕ್ತಮಾಡಿದೆ. ನಿರಪರಾಧಿ ಜನರನ್ನು ಸತತವಾಗಿ ಕೊಲ್ಲುವ ಮತ್ತು ಪ್ರತ್ಯೇಕತಾವಾದಿ ಘೋಷಣೆಗಳನ್ನು ಘೋಷಿಸುತ್ತಿರುವುದನ್ನು ಬಲವಾಗಿ ಖಂಡಿಸುತ್ತಾ, ಪಂಜಾಬ್ ಸಮಸ್ಯೆಯ ಕುರಿತು ವಿರೋಧ ಪಕ್ಷಗಳ ಸಲಹೆಗಳನ್ನು ಕಾಂಗ್ರೆಸ್ಸಿನ ಕೇಂದ್ರ ಸರಕಾರ ಮತ್ತು ಇಂದಿರಾಗಾಂಧಿ ಒಪ್ಪಿಕೊಂಡಿದ್ದರೆ ಅಂಥ ಹೃದಯ ದ್ರಾವಕ ಘಟನೆಗಳನ್ನು ತಪ್ಪಿಸಬಹುದಿತ್ತೆಂಬ ಅಭಿಪ್ರಾಯ ವ್ಯಕ್ತಮಾಡಿದೆ.

ಆಡಳಿತಾತ್ಮಕ ಕ್ರಮಗಳಿಂದಷ್ಟೇ ಈ ಸಮಸ್ಯೆಯನ್ನು ಬಗೆಹರಿಸಲು ಸಾಧ್ಯವಿಲ್ಲೆಂದೂ, ಇದಕ್ಕೆ ರಾಜಕೀಯ ಪರಿಹಾರ ಕಂಡು ಹಿಡಿಯಬೇಕೆಂದೂ ನಮ್ಮ ಪಕ್ಷ ಸತತವಾಗಿ ಸರಕಾರವನ್ನು ಎಚ್ಚರಿಸಿತ್ತು. ಆ ರೀತಿ ಪರಿಹಾರ ಕಂಡು ಹಿಡಿಯದಿದ್ದಲ್ಲಿ ಸರಕಾರ ತೀವ್ರವಾದಿಗಳ ಬಲೆಗೆ ಬೀಳುತ್ತದೆಂದು ಪಾರ್ಟಿ ಅಭಿಪ್ರಾಯ ವ್ಯಕ್ತಮಾಡಿತ್ತು.

ಜೂನ್ 7 ರ ಸಂಪಾದಕೀಯದಲ್ಲಿ ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯು ಸರಿಯಾದ ಈ ಅಭಿಪ್ರಾಯ ವ್ಯಕ್ತ ಮಾಡಿದೆ. "ಆಶ್ರಯ ಪಡೆಯುತ್ತಿರುವ ಗುನ್ಹೆಗಾರರ ಗುಂಪನ್ನು ಹೊರಗಟ್ಟುವ ಸಲುವಾಗಿ ಅಮೃತಸರದಲ್ಲಿಯ ಸ್ವರ್ಣ ಮಂದಿರಕ್ಕೆ ಭಾರತದ ಸೈನ್ಯವನ್ನು ಕಳುಹಿಸುವ ದಿನವನ್ನು ತಪ್ಪಿಸುವ ಸಲುವಾಗಿ ಭಾರತ ದೇಶದ ವಿಲಿಯ ಗಟ್ಟಲೆ ಜನ ಜಗತ್ತಿನಲ್ಲಿಯ ಬೇಕಾದ್ದನ್ನು ಅರ್ಪಿಸಲು ಸಿದ್ಧರಾಗಿದ್ದರು." ರಾಜಕೀಯ ತೀವ್ರವಾದಿಗಳ ವಿರುದ್ಧ ಸೈನ್ಯ ಕಾರ್ಯಾಚರಣೆ ಮಾಡಬೇಕಾಗಿ ಬಂದಿರುವುದು ನಮ್ಮ ಪ್ರಜಾರಾಜ್ಯದ ಆಡಳಿತೆಯ ಮೇಲೆ ಕೆಟ್ಟ ಪರಿಣಾಮ ಬೀರಿತೆಂಬ ಅಭಿಪ್ರಾಯವನ್ನು ಇನ್ನೂ ಹಲವಾರು ಜನ ವ್ಯಕ್ತಮಾಡಿದ್ದಾರೆ.

ಉಗ್ರವಾದಿಗಳನ್ನು ಹೊರಗೆಳೆದು ಕಾನೂನು ಮತ್ತು ಸುವ್ಯವಸ್ಥೆಯನ್ನು ಜಾರಿಗೊಳಿಸಲು ಈ ಸಂದರ್ಭದಲ್ಲಿ ಸೈನ್ಯ ಕಾರ್ಯಾಚರಣೆ ಅಗತ್ಯವಾಗಿತ್ತೆ? ಎಂಬ ಕುರಿತು ಚರ್ಚಿಸಿ ಈಗ ಪ್ರಯೋಜನವಿಲ್ಲ. ಎಡೆಬಿಡದ ಗುಂಡಿನ ಸುರಿಮಳೆ ನಡೆದಿದ್ದರೂ ಹರಮಿಂದರ್ ಸಾಹಿಬ್‌ನತ್ತ ಒಂದೇ ಒಂದು ಗುಂಡನ್ನು ಹಾರಿಸಲಿಲ್ಲ. ಸಶಸ್ತ್ರ ಪಡೆಗಳು ಸ್ವರ್ಣ ಮಂದಿರದ ರಕ್ಷಣೆಗೆ ಸಾಕಷ್ಟು ಮುಂಜಾಗರೂಕತೆ ವಹಿಸಿದ್ದು ನಿಸ್ಸಂಶಯ.

ಆದಾಗ್ಯೂ ಆ ರಾಜ್ಯ ಹಾಗೂ ಇಡೀ ದೇಶದಲ್ಲಿ ಈ ವಿದ್ಯಮಾನಗಳಿಂದುಂಟಾದ ಪರಿಣಾಮಗಳನ್ನು ನಾವು ಒಟ್ಟಾಗಿ ಗಮನಿಸಬೇಕಾಗುತ್ತದೆ. ಕಳೆದೆರಡು ವರ್ಷಗಳಿಂದ ಏನು ನಡೆಯುತ್ತಿದೆಂಬುದನ್ನು ಪ್ರತ್ಯೇಕಿಸಿ ಇದನ್ನು ಗಮನಿಸುವದು ಸಾಧ್ಯವಿಲ್ಲ.

ಭೂಗತ ಶಸ್ತ್ರಾಗಾರ

ಮುಗ್ಧ ನಾಗರಿಕರ ಹತ್ಯೆಯನ್ನು ಬಹಿರಂಗವಾಗೇ ಪ್ರತಿಪಾದಿಸುತ್ತಿದ್ದ ಭಯೋತ್ಪಾದಕರು ಸ್ವರ್ಣ ಮಂದಿರದಂಥ ಪವಿತ್ರ ಸ್ಥಾನವನ್ನು ಶಸ್ತ್ರಾಗಾರವಾಗಿ ಪರಿವರ್ತಿಸಿದ ಪರಿಣಾಮವಾಗಿ ಉಂಟಾದ ಅತ್ಯಾಧುನಿಕ ಶಸ್ತ್ರಾಸ್ತ್ರಗಳ ಹೇರಳ ಸಂಗ್ರಹ, ಸುರಂಗಮಾರ್ಗಗಳ ಭೂಗತ ಜಾಲ ಮತ್ತು ಅಕಾಲ್ ತಖ್ತ್‌ನ ಕೇಂದ್ರ ಕೋಣೆಯಲ್ಲೇ ತೆರೆದುಕೊಂಡಿದ್ದ ಒಳಮಾರ್ಗ ಇತ್ಯಾದಿಗಳು ಧರ್ಮಾನುಯಾಯಿಗಳನ್ನು ನಾಚಿಕೆಗೀಡು ಮಾಡಿವೆ.

ಸೈನ್ಯಪಡೆ ಸ್ವರ್ಣಮಂದಿರವನ್ನು ವಿಸ್ಫೋಟಿಸಬೇಕೆಂಬುದು ಉಗ್ರವಾದಿಗಳ ಬಯಕೆಯಾಗಿತ್ತು. ಹೀಗಾಗುವದರಿಂದ ಸಿಖ್ ಜನತೆಯ ಧಾರ್ಮಿಕ ಭಾವನೆಗಳು ಉದ್ವಿಗ್ನಗೊಂಡು ದುರುದ್ದೇಶ ಪೂರಿತ ಖಲಿಸ್ತಾನ್ ಘೋಷಣೆಗೆ ಅವರ ಬೆಂಬಲ ದೊರೆಯಬಹುದೆಂಬುದು ಉಗ್ರವಾದಿಗಳ ನಿರೀಕ್ಷೆಯಾಗಿತ್ತು. ದುರದೃಷ್ಟವಶಾತ್ ಗುರುದ್ವಾರಗಳ ಪಾವಿತ್ರ್ಯಕ್ಕೆ ಉಗ್ರಗಾಮಿಗಳು ಹೇಗೆ ಮಸಿ ಬಳಿದಿದ್ದಾರೆ ಎಂಬುದನ್ನು ಸಿಖ್ ಜನತೆ ಇನ್ನೂ ಗಮನಿಸದಿರುವುದು ದುರದೃಷ್ಟಕರ. ಒಳಗೇನು ನಡೆಯುತ್ತಿತ್ತೆಂಬುದು ಸಾರ್ವಜನಿಕವಾಗಿ ಬಹಿರಂಗಗೊಂಡರೆ ಇಡೀ ಸಿಖ್ ಸಮುದಾಯವನ್ನು ನಾಚಿಕೆಗೀಡು ಮಾಡುತ್ತದೆ.

ಜೂನ್ 6 ರಂದು ಅಮೃತಸರ್ ಮತ್ತು ಪಂಜಾಬಿನ ಇತರೆಡೆಯ ಘಟನೆಗಳನ್ನು ತಪ್ಪಿಸಲು ಸಾಧ್ಯವಿತ್ತೆ? ಎಂಬುದು ಈಗ ನಮ್ಮ ಮುಂದಿರುವ ಪ್ರಶ್ನೆ. "ಹೌದು ಖಂಡಿತವಾಗಿಯೂ ಸಾಧ್ಯವಿತ್ತು" ಎಂಬುದು ನಮ್ಮ ಉತ್ತರ.

ತಪ್ಪಿಸಲಾರದಂಥ ಪರಿಸ್ಥಿತಿ

ಭಿಂದ್ರನ್‌ವಾಲೆನ ಒತ್ತಾಯದ ಮೇರೆಗೆ ಅಕಾಲಿ ಪಕ್ಷವು ಪಂಥ ಸಮಾವೇಶವೊಂದನ್ನು ಕರೆದು 45 ಬೇಡಿಕೆಗಳ ಯಾದಿಯೊಂದನ್ನು ಸಿದ್ಧಪಡಿಸಿ ಕೇಂದ್ರ ಸರಕಾರದೊಡನೆ ನೇರ ಸಂಧಾನ ಪ್ರಾರಂಭಿಸಿದಾಗ ಒಂದೇ ಒಂದು ಬೇಡಿಕೆಯೂ ಸರ್ಕಾರಕ್ಕೆ ಸ್ವೀಕಾರಾರ್ಹವಾಗಿ ತೋರಲಿಲ್ಲ.

1982 ರ ಅಗಸ್ಟ್ 3 ರಂದು ಅಕಾಲಿಗಳು ತಮ್ಮ ಮೋರ್ಚಾ "ಧರ್ಮಯುದ್ಧ" ವನ್ನು ಪ್ರಾರಂಭಿಸಿದರು. ಬಂಧನಕ್ಕೊಳಗಾಗುವ ಮುನ್ನ ಶ್ರೀ ಪ್ರಕಾಶ್ ಸಿಂಗ್ ಬಾದಲ್ ಅವರು ವಿರೋಧಿ ಪಕ್ಷಗಳನ್ನುದ್ದೇಶಿಸಿ ಬರೆದ ಪತ್ರದಲ್ಲಿ ವಿವಿಧ ಬೇಡಿಕೆಗಳಿಗೆ ಸಂಬಂಧಿಸಿದಂತೆ ಅಕಾಲಿ ಪಕ್ಷದ ನಿಲುವನ್ನು ವಿವರಿಸಿದ್ದರು. ನಾಲ್ಕು ಧಾರ್ಮಿಕ ಹಾಗೂ ಎಲ್ಲಾ ಪಂಜಾಬಿಗಳಿಗೂ ಸಂಬಂಧಿಸಿದ ಆರು—ಹೀಗೆ ಒಟ್ಟು ಹತ್ತು ಬೇಡಿಕೆಗಳನ್ನು ಅವರು ಮುಂದಿಟ್ಟಿದ್ದರು. ಇದೊಂದು ಮಹತ್ವದ ಬದಲಾವಣೆಯಾಗಿತ್ತು. ಆದರೆ ಆಗಲೂ ಸರಕಾರ ತಪ್ಪಿಗಿತ್ತು. ಅಕಾಲಿಗಳು ಗಣನೀಯ ಪ್ರಮಾಣದಲ್ಲಿ ಜನಸಂಘಟಣೆಯ ಸಾಮರ್ಥ್ಯ ಹೊಂದಿ ಸೆರೆಮನೆಗಳಲ್ಲಿ ಸ್ಥಳವೇ ಇಲ್ಲವೆನ್ನುವಂಥ ಸ್ಥಿತಿಯುಂಟಾದಾಗ ಮಾತ್ರ ಸರಕಾರ ಕಣ್ತೆರೆದು ಸಂಧಾನದ ಮಾತುಕತೆಗಳನ್ನು ಪ್ರಾರಂಭಿಸಿತು.

ಮಾಜಿ ವಿದೇಶಾಂಗ ಸಚಿವ ಸ್ವರ್ಣ ಸಿಂಗ್ ಅವರ ಪ್ರಯತ್ನದ ಪರಿಣಾಮವಾಗಿ 1982 ರ ನವೆಂಬರ್ 2 ರಂದು ಒಮ್ಮತವೊಂದನ್ನು ತಲುಪಲಾಯಿತು. ಇದರಲ್ಲಿ ನನ್ನ ಪಾತ್ರವೂ ಕೊಂಚ ಇತ್ತು. ಆದರೆ ನವೆಂಬರ್ 3 ರಂದು ಲೋಕಸಭೆಯಲ್ಲಿ ಗೃಹಸಚಿವರಿತ್ತ ಹೇಳಿಕೆ ಮಾತ್ರ ಈ ಒಮ್ಮತದ ನಿರ್ಣಯಕ್ಕೆ ವ್ಯತಿರಿಕ್ತವಾಗಿತ್ತು. ತಾನೇ ಮಾಡಿಕೊಂಡ ಒಪ್ಪಂದವನ್ನು ಕೈಬಿಟ್ಟಂತಾಗಲಿಲ್ಲವೇ ?

ನವೆಂಬರ್ 4 ರಂದು ತಮ್ಮ ಹೋರಾಟದ ಹೊಸ ಅಧ್ಯಾಯವೊಂದನ್ನು ಘೋಷಿಸಲಿದ್ದ ಅಕಾಲಿಗಳ ಮನವೊಲಿಸಿ ಆ ನಿರ್ಧಾರವನ್ನು ನವೆಂಬರ್ 19 ರ ವರೆಗೆ ಮುಂದೂಡಲಾಯಿತು. ಈ ಮಧ್ಯದ ಅವಧಿಯನ್ನು ಸಮಸ್ಯೆಯ ಎಳೆಯನ್ನು ಕೈಗೆತ್ತಿಕೊಳ್ಳುವ ಮುಖಾಂತರ ಸದುಪ

(6ನೇ ಪುಟ ನೋಡಿ)

ಅರುಣ್ ಶೌರಿ "ಬಯಲು" ಗೊಳಿಸಿದ ಟೊಳ್ಳು ಸಂಗತಿಗಳು | 4

ವಿಮೋಚನಾ ಹೋರಾಟಗಳು, ಫ್ಯಾಸಿಸಂ ಮತ್ತು ಕಾಂಗ್ರೆಸ್ಸಿನ ತಪ್ಪುಗ್ರಹಿಕೆ

(ಎರಡನೆಯ ಭಾಗದ ಎರಡನೆಯ ಕಂತು)

— ಕಾ|| ಎಂ. ಬಸವಪುನ್ನಯ್ಯ

(ಕಳೆದ ಸಂಚಿಕೆಯಿಂದ)

ಎರಡನೇ ಮಹಾಯುದ್ಧದ ಎರಡು ಘಟ್ಟಗಳು

ಎರಡನೇ ಜಾಗತಿಕ ಯುದ್ಧದಲ್ಲಿ ಎರಡು ಘಟ್ಟಗಳಿದ್ದವು, ಮೊದಲ ಘಟ್ಟ ಸುಮಾರಾಗಿ 18 ತಿಂಗಳಿದ್ದರೆ ಎರಡನೇ ಘಟ್ಟ ಸುಮಾರು ನಾಲ್ಕೂವರೆ ವರ್ಷಗಳ ಅವಧಿಯದ್ದು ಎಂದು ಶ್ರೀಮಾನ್ ಶೌರಿಗೆ ಹೇಳಿ ಕೊಡಲು ಪ್ರಯತ್ನಿಸುವುದೆಂದರೆ ಆತನನ್ನು ಮಾಧ್ಯಮಿಕ ಶಾಲಾ ವಿದ್ಯಾರ್ಥಿಯೆಂದು ಪರಿಗಣಿಸಿದ ಹಾಗಾಗುತ್ತದೆ. ಶೌರಿಯಂತಹ ಜನರಿಗೆ ಯುದ್ಧ ಎಂದರೆ ಯುದ್ಧ, ಅಷ್ಟೆ, ಬ್ಯಾರಿಕೇಡ್‌ಗಳ ಅತ್ತ-ಇತ್ತ ಯಾವ ಸಾಮಾಜಿಕ-ಆರ್ಥಿಕ ಶಕ್ತಿಗಳು ಮುಖಾಮುಖಿಯಾಗಿ ನಿಂತಿವೆಯೆಂಬುದು ಅವರಿಗೆ ಬೇಕಿಲ್ಲ. ಶ್ರೀಮಾನ್ ಶೌರಿ ತನ್ನ 'ಸಂಶೋಧನಾ' ಲೇಖನಗಳ ಮೂಲಕ ಯಾವ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ನಾಯಕರ ಧ್ಯೇಯ ಪ್ರತಿಪಾದನೆಗೆ ಪ್ರಯತ್ನಿಸಿದ್ದರೋ ಆ ನಾಯಕರೇ ಈ ವಿಷಯದಲ್ಲಿ ಶ್ರೀಮಾನ್ ಶೌರಿಯ ಈ ಅಭಿಪ್ರಾಯವನ್ನು ಒಪ್ಪಿರಲಿಲ್ಲ.

ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಯುದ್ಧ ಕುರಿತಾದ ನಿರ್ಣಯಗಳ ಅಧಿಕೃತ ದಾಖಲೆಗಳು ಅರುಣ್ ಶೌರಿಯ ಸುಳ್ಳು "ಇತಿಹಾಸ"ದ ಚಿತ್ರಣವನ್ನು ಚೂರು ಚೂರಾಗಿಸುತ್ತವೆ.

"ಫ್ಯಾಸಿಸಂ ಮತ್ತು ನಾಝಿಸಂನ ಸಿದ್ಧಾಂತ ಮತ್ತು ಆಚರಣೆಯನ್ನು, ಯುದ್ಧ ಮತ್ತು ಹಿಂಸೆಯನ್ನು ಅವರು ಭವ್ಯೀಕರಿಸುವುದನ್ನು ಮತ್ತು ಮಾನವ ಚೇತನದ ದಮನವನ್ನು ತಾನು ಸಂಪೂರ್ಣವಾಗಿ ನಿರಾಕರಿಸುವುದಾಗಿ ಕಾಂಗ್ರೆಸ್ ಬಾರಿ-ಬಾರಿಗೂ ಘೋಷಿಸಿದೆ. ಬಾರಿ ಬಾರಿಗೂ ಅವರು (ಫ್ಯಾಸಿಸ್ಟರು, ನಾಝಿಗಳು) ಆಕ್ರಮಣದಲ್ಲಿ ತೊಡಗಿರುವುದನ್ನು, ನಾಗರಿಕ ವರ್ತನೆಯ ಸರ್ವಮಾನ್ಯ ಸಂಗತಿಗಳನ್ನು, ನೀತಿಗಳನ್ನು ಕೊಚ್ಚಿ ಹಾಕಿರುವುದನ್ನು ಕಾಂಗ್ರೆಸ್ ಖಂಡಿಸಿದೆ. ಭಾರತೀಯ ಜನತೆ ಯಾವ ಸಾಮ್ರಾಜ್ಯಶಾಹಿಯ ವಿರುದ್ಧ ಹೋರಾಡಿದೆಯೋ ಆ ಸಾಮ್ರಾಜ್ಯಶಾಹಿ ನೀತಿ ಫ್ಯಾಸಿಸಂ ಮತ್ತು ನಾಝಿಸಂನಲ್ಲಿ ತೀವ್ರ ಸ್ವರೂಪ ಪಡೆದಿರುವುದನ್ನು ಕಾಂಗ್ರೆಸ್ ಕಂಡಿದೆ. ಆದ್ದರಿಂದ ಜರ್ಮನಿಯ ನಾಝೀ ಸರಕಾರ ಪೋಲೆಂಡಿನ ಮೇಲೆ ನಡೆಸಿರುವ ಇತ್ತೀಚಿನ ಆಕ್ರಮಣವನ್ನು ಕಾರ್ಯಕಾರಿ ಸಮಿತಿ ಹಿಂದೆ-ಮುಂದೆ ನೋಡದೆ ಖಂಡಿಸಬೇಕು ಮತ್ತು ಈ ಆಕ್ರಮಣವನ್ನು ಪ್ರತಿರೋಧಿಸುತ್ತಿರುವವರಿಗೆ ಸಹಾನುಭೂತಿ ವ್ಯಕ್ತಪಡಿಸಬೇಕು."

ಮುಂದುವರಿದು ನಿರ್ಣಯ ಗಮನಿಸಿದ ಸಂಗತಿಗಳಿವು— "ಪ್ರಸಕ್ತ ಯುರೋಪಿನ ಯುದ್ಧವೇ ವರ್ಸೇಲ್ಸ್ ಸಂಧಿಯ ಮತ್ತು ಅದರ ರಚನೆಕಾರರ ನೀಚ ವಿಫಲತೆಯನ್ನೂ ತೋರಿಸುತ್ತದೆ. ಈ ರಚನೆಕಾರರು ತಾವು ಇತ್ತ ವಚನ ಮುರಿದು ಸೋತ ದೇಶಗಳ ಮೇಲೆ ಸಾಮ್ರಾಜ್ಯಶಾಹೀ ಶಾಂತಿಯನ್ನು ಹೇರಿದರು. ಈ ಸಂಧಿಯ ಒಂದು ಫಲವಾದ ಲೀಗ್ ಆಫ್‌ನೇಶನ್ಸ್‌ನ್ನು ಅದನ್ನು ಹುಟ್ಟುಹಾಕಿದ ದೇಶಗಳು ಬಲಾತ್ಕಾರವಾಗಿ ಅದರ ಬಾಯಿ ಕಟ್ಟಿ, ಕತ್ತು ಹಿಸುಕಿ ನಂತರ ಕೊಂದರು."

"ಸಾಮ್ರಾಜ್ಯಶಾಹೀ ಯುದ್ಧಕ್ಕೆ ಸಹಕಾರವಿಲ್ಲ"

"ಗಾಢ ವೆಂದೆನಿಸುವ ನಂಬಿಕೆಯ ಘೋಷಣೆಯ ಹಿಂದೇನೇ ನಿರ್ಲಜ್ಜ ದ್ರೋಹ ನಡೆದುದನ್ನು ನಂತರದ ಇತಿಹಾಸ ಪ್ರದರ್ಶಿಸಿದೆ. ಮಂಚೂರಿಯಾದಲ್ಲಿ ಬ್ರಿಟಿಶ್ ಸರಕಾರ ಆಕ್ರಮಣಕ್ಕೆ ಕುಮ್ಮಕ್ಕು ನೀಡಿತು, ಅಬಿಸೀನಿಯಾದಲ್ಲಿ ಅವರು ಮೌನಸಮ್ಮತಿ ನೀಡಿದರು ಜೆಕೋಸ್ಲೋವಾಕಿಯಾ ಮತ್ತು ಸ್ಪೇನ್‌ನಲ್ಲಿ ಪ್ರಜಾಪ್ರಭುತ್ವ ಅಪಾಯದಲ್ಲಿದ್ದಾಗ ಅವಕ್ಕೆ ಉದ್ದೇಶಪೂರ್ವಕವಾಗಿಯೇ ವಿಶ್ವಾಸಘಾತ ಬಗೆಯಲಾಯಿತು ಮತ್ತು ಸಾಮೂಹಿಕ ಭದ್ರತೆಯ ಸಮಸ್ತ ಯೋಜನೆಯನ್ನೇ ಅದಕ್ಕೆ ಮುಂಚೆ ಅದರಲ್ಲಿ ತಮ್ಮ ದೃಢನಂಬಿಕೆ ವ್ಯಕ್ತಪಡಿಸಿದ ಶಕ್ತಿಗಳೇ ಬುಡಮೇಲು ಮಾಡಿದವು".

"ಭಾರತೀಯ ಪ್ರಜಾಪ್ರಭುತ್ವದ ಹಿತಾಸಕ್ತಿಗಳು ಬ್ರಿಟಿಶ್ ಪ್ರಜಾಪ್ರಭುತ್ವದ ಹಿತಾಸಕ್ತಿಗಳ ನಡುವೆ ತಿಕ್ಕಾಟವೇನೂ ಇಲ್ಲ ಅಥವಾ ಜಾಗತಿಕ ಪ್ರಜಾಪ್ರಭುತ್ವದ ಹಿತಾಸಕ್ತಿಗಳೊಂದಿಗೂ ಅದರ ತಿಕ್ಕಾಟವಿಲ್ಲ. ಆದರೆ ಭಾರತ ಅಥವಾ ಇತರೆಡೆಗಳಲ್ಲಿನ ಪ್ರಜಾಪ್ರಭುತ್ವ ಹಾಗೂ ಸಾಮ್ರಾಜ್ಯಶಾಹಿ ಮತ್ತು ಫ್ಯಾಸಿಸಂನ ನಡುವೆ ಅಂತರ್ಗತ ತಿಕ್ಕಾಟವಿದೆ."

"ಸಾಮ್ರಾಜ್ಯಶಾಹಿ ಮತ್ತು ಫ್ಯಾಸಿಸಂನ್ನು ಮತ್ತು ಅದು ಹಿಂದೆ ಮತ್ತು ಈಗ ನಡೆಸಿರುವ ಆಕ್ರಮಣಗಳನ್ನು ಕೊನೆಗೊಳಿಸುವುದೇ ನಿಜವಾದ ಪ್ರಜಾಪ್ರಭುತ್ವಕ್ಕಾಗಿ ಕೈಗೊಳ್ಳಬೇಕಾದ ಕ್ರಮ— ಆದರೆ ಸಾಮ್ರಾಜ್ಯಶಾಹೀ ಮಾರ್ಗದಲ್ಲಿ ನಡೆಸುತ್ತಿರುವ ಒಂದು ಯುದ್ಧದಲ್ಲಿ, ಭಾರತ ಮತ್ತು ಇತರೆಡೆಗಳಲ್ಲಿ ಸಾಮ್ರಾಜ್ಯಶಾಹಿಯನ್ನು ಕ್ರೋಢೀಕರಿಸುವ ಯುದ್ಧದಲ್ಲಿ ಯಾವುದೇ ರೀತಿಯಲ್ಲಿ ಸಂಬಂಧವಿರಿಸಿಕೊಳ್ಳಲು ಅಥವಾ ಯಾವುದೇ ಸಹಕಾರ ನೀಡುವುದು ಈ ಸಮಿತಿಗೆ ಸಾಧ್ಯವಿಲ್ಲ."

1939 ರ ನವಂಬರ್ 22 ರ ನಿರ್ಣಯ ಈ ಪ್ರಶ್ನೆಯನ್ನು ಇನ್ನೂ ಸ್ಪಷ್ಟವಾಗಿ ಗುರುತಿಸಿತು—" ಯುದ್ಧ ನಡೆದು ಬಂದ ದಾರಿ ಮತ್ತು ಬ್ರಿಟೀಷ್ ಹಾಗೂ ಫ್ರೆಂಚ್ ಸರಕಾರಗಳು ಅನುಸರಿಸಿದ ಧೋರಣೆ, ವಿಶೇಷವಾಗಿ ಭಾರತದ ಬಗ್ಗೆ ಬ್ರಿಟೀಷ್ ಸರ್ಕಾರದ ಪರವಾಗಿ ಮಾಡಿದ ಘೋಷಣೆಗಳು ಇವೆಲ್ಲದರಿಂದ ಸದ್ಯದ ಯುದ್ಧವೂ 1914-18 ರ ಜಾಗತಿಕ ಯುದ್ಧದಂತೆ ಸಾಮ್ರಾಜ್ಯ ಶಾಹೀ ಉದ್ದೇಶಗಳಿಗಾಗಿಯೇ ನಡೆಯುತ್ತಿರುವಂತೆ ಕಾಣುತ್ತಿದೆ, ಬ್ರಿಟೀಶ್ ಸಾಮ್ರಾಜ್ಯಶಾಹೀ ಭಾರತದಲ್ಲಿ ಬೇರು ಬಿಟ್ಟೇ ಉಳಿಯುವಂತೆ ಕಾಣುತ್ತಿದೆ, ಇಂತಹ ಯುದ್ಧದೊಂದಿಗೆ ಮತ್ತು ಇಂತಹ ಧೋರಣೆಯೊಂದಿಗೆ ಸಂಬಂಧ ವಿರಿಸಿಕೊಳ್ಳಲು ಕಾಂಗ್ರೆಸ್ಸಿಗೆ ಸಾಧ್ಯವಿಲ್ಲ ಮತ್ತು ಈ ಉದ್ದೇಶಕ್ಕಾಗಿ ಭಾರತದ ಸಂಪನ್ಮೂಲಗಳನ್ನು ಕೊಳ್ಳೆ ಹೊಡೆಯುವುದನ್ನು ಅದು ಸಹಿಸಲು ಸಾಧ್ಯವಿಲ್ಲ,"

ಸಂಗತಿಗಳನ್ನು ಎಷ್ಟು ಸಾಧ್ಯವೋ ಅಷ್ಟು ಸ್ಪಷ್ಟವಾಗಿ, ದೃಢವಾಗಿ ಹೇಳಲಾಗಿದೆ ಹೀಗಿರುವಾಗ ಭಾರತ ಕಮ್ಯೂನಿಸ್ಟ್ ಪಕ್ಷ ಮತ್ತು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ನಡುವೆ ವಿಸಂಧಿ [ಭಿನ್ನಾಭಿಪ್ರಾಯ] ಎಲ್ಲಿಂದ ಬಂತು ? ಯಾರು ಯಾರಿಗೆ ಮತ್ತು ಏನು ವಿಶ್ವಾಸಘಾತ ಬಗೆದರು ಎಂಬ ಪ್ರಶ್ನೆ ಯೇಳುವುದು ಇಲ್ಲಿಯೇ. 1942 ರ ಆಗಸ್ಟ್ 9 ರಂದು ಘೋಷಿಸಿದ " ಮಾಡು ಇಲ್ಲವೆ ಮಡಿ " ಯುದ್ಧದಲ್ಲಿ ಕಮ್ಯೂನಿಸ್ಟರು "ವಿಶ್ವಾಸಘಾತ" ಬಗೆದರು ಎಂದು ದೂಷಣೆ ಹೊರಿಸುವ ಶ್ರೀಮಾನ್ ಶೌರಿ ದ್ವಿತೀಯ ಮಹಾಯುದ್ಧದ ಈ ಅವಧಿಯ ಬಗ್ಗೆ ಯಾಕೆ ಬಾಯಿಗೆ ಭದ್ರವಾಗಿ ಬೀಗಹಾಕಿ ಕೊಂಡಿದ್ದಾರೆ ?

ಏನು ಮಾಡುತ್ತಿದ್ದರು ?

ಸಪ್ಟೆಂಬರ್ 1939 ರಿಂದ ಆಗಸ್ಟ್ 1942 ರ ವರೆಗೆ ಸದಾ ಸಾಮ್ರಾಜ್ಯಶಾಹಿ, ನಾಝಿವಾದ ಫಾಸಿಸಂ ಮತ್ತು ಯುದ್ಧದ ವಿರುದ್ಧ ನಿರ್ಣಯಗಳ ಮೂಲಕ ಪರಿಹಾಸ ಮಾಡುತ್ತಾ, ಯುದ್ಧ ಮತ್ತು ಹಿಂಸೆಯ ಪೀಡೆಯ ವಿರುದ್ಧ ಹೋರಾಡುವ ಗಂಭೀರ ಪ್ರತಿಜ್ಞೆಗೈಯುತ್ತಾ ಇದ್ದ ಈ ಮೂರು ವರ್ಷಗಳಲ್ಲಿ ಕಾಂಗ್ರೆಸಿನೊಳಗಿನ ರಾಜಕೀಯ ಹುಲಿಗಳು ಏನು ಮಾಡುತ್ತಿದ್ದರು ? ಸೆಪ್ಟಂಬರ್ 1939 ರಿಂದ ಆಗಸ್ಟ್ 1942 ರ ವರೆಗಿನ ಮೂರು ವರ್ಷಗಳ ದೀರ್ಘ ಯುದ್ಧಕಾಲದಲ್ಲಿ " ಕ್ವಿಟ್ ಇಂಡಿಯಾ ", " ಮಾಡು ಇಲ್ಲದೆ ಮಡಿ ", ಅಂತ್ಯದವರೆಗೂ ಹೋರಾಟ " ಇತ್ಯಾದಿ ಘೋಷಣೆಗಳನ್ನು ಎತ್ತದಂತೆ ಯಾರು ಕಾಂಗ್ರೆಸ್ ನಾಯಕರನ್ನು ತಡೆ ಹಿಡಿದಿದ್ದರು? ನೂರಾರು ಕಮ್ಯೂನಿಸ್ ನಾಯಕರು ಮತ್ತು ಕಾರ್ಯಕರ್ತರನ್ನು ಬೇಕಾಬಿಟ್ಟಿ ಬಂಧಿಸಿ ಜೈಲಿಗೆ ನೂಕಿ ರಾಷ್ಟ್ರೀಯ ಆಂದೋಲನದ ಒಂದು ಪ್ರಮುಖ ಪುಕಡಿ ಗುಪ್ತ ಜೀವನದ ತೊಂದರೆ ಹಾಗೂ ಅನಾನುಕೂಲತೆಗಳನ್ನು ಸಹಿಸಬೇಕಾಗಿ ಬಂದಾಗ ಕಾಂಗ್ರೆಸಿನ ಮುಖ್ಯ ನಾಯಕರು ಗಾಂಧೀಜಿಯಿಂದ ಹಿಡಿದು ನೆಹರೂ, ಪಟೇಲರವರೆಗೂ— ಯಾರೂ ಈ ಬ್ರಿಟೀಶ್ ಕ್ರಮವನ್ನು ಏಕೆ ಖಂಡಿಸಲಿಲ್ಲ ?

ಬೂರ್ಜ್ವಾವರ್ಗ ಮತ್ತು ಕಾರ್ಮಿಕವರ್ಗದ ನಾಯಕ ಅಂದರೆ ಕಾಂಗ್ರೆಸಿಗರು ಮತ್ತು ಕಮ್ಯೂನಿಸ್ಟರು ಯುದ್ಧದ ಬಗ್ಗೆ ಬ್ರಿಟೀಶ್ ಸಾಮ್ರಾಜ್ಯಶಾಹೀ ಯುದ್ಧ ಪ್ರಯತ್ನಗಳನ್ನು ಪ್ರತಿರೋಧಿಸಲು ಬೇಕಾದ ಹೋರಾಟದ ತಂತ್ರ ಮತ್ತು ವಿಧಾನಗಳ ಬಗ್ಗೆ ಮತ್ತು ಸಾಮೂಹಿಕ, ಸಮರಶೀಲ, ಸಾಮ್ರಾಜ್ಯಶಾಹೀ ವಿರೋಧೀ ಹೋರಾಟವನ್ನು ನಡೆಸಿಕೊಂಡು ಹೋಗುವ ಬಗ್ಗೆ ವಿಭಿನ್ನವಾದ ತಿಳುವಳಿಕೆ ಹೊಂದಿದ್ದರು ಎಂಬ ಸತ್ಯವನ್ನು ಮರೆಮಾಚಿ ಉಪಯೋಗವಿಲ್ಲ.

ಕಾಂಗ್ರೆಸಿಗರು ಮತ್ತು ಕಮ್ಯೂನಿಸ್ಟರು ಇಬ್ಬರೂ ಯುದ್ಧ ಸಾಮ್ರಾಜ್ಯಶಾಹೀ ಯುದ್ಧವಾಗಿ ಸಾಮ್ರಾಜ್ಯಶಾಹೀ ಗ್ಯಾಂಗ್‌ಗಳು ಪರಸ್ಪರ ಎದುರಾಗಿನಿಂತ ಯುದ್ಧವಾಗಿ ಆರಂಭವಾಯಿತು ಎಂದು ನಿಸ್ಸಂದಿಗ್ಧ ಮಾತಗಳಲ್ಲಿ ಹೇಳಿದರು ಆದರೆ ಸಾಮ್ರಾಜ್ಯ ಶಾಹಿಯನ್ನು ಎದುರಿಸಿ ಹೋರಾಡುವ ಕಾರ್ಯಾಚರಣೆಯ ಪ್ರಶ್ನೆ ಬಂದಾಗ ಯುದ್ಧ ಪರಿಸ್ಥಿತಿಯ ಬಗ್ಗೆ ಎರಡು ಪರಸ್ಪರ ಬೇರೆಯಾದ ಅಂದಾಜು, ಎರಡು ಪರಸ್ಪರ ಭಿನ್ನವಾದ ಕಾರ್ಯತಂತ್ರಗಳು ಮೂಡಿ ಬಂದವು ಇವು ಎರಡು ಮೂಲಭೂತ ವರ್ಗದೃಷ್ಟಿಕೋನಗಳನ್ನಾಧರಿಸಿದ್ದವು.

ಕಮ್ಯೂನಿಸ್ಟರು " ಸಾಮ್ರಾಜ್ಯಶಾಹೀ ಯುದ್ಧವನ್ನು ಬ್ರಿಟೀಶ್ ಸಾಮ್ರಾಜ್ಯ ಶಾಹಿಯ ವಿರುದ್ಧ ರಾಷ್ಟ್ರೀಯ ವಿಮೋಚನಾ ಯುದ್ಧವಾಗಿ ಪರಿವರ್ತಿಸಬೇಕು" ಎಂಬ ಘೋಷಣೆ ಯನ್ನೆತ್ತಿದರು ಇದಕ್ಕೆ ಬದಲಾಗಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ನಾಯಕರು ಸಾಮ್ರಾಜ್ಯ ಶಾಹಿಗಳ "ಹೃದಯ ಪರಿವರ್ತನೆ" ಯ ನಿರೀಕ್ಷೆಯಲ್ಲಿದ್ದು ಬ್ರಿಟನ್ ಭಾರತೀಯ ಸ್ವಾತಂತ್ರ್ಯದ ಘೋಷಣೆ ಮಾಡಬೇಕೆಂದು ಮತ್ತೆ ಮತ್ತೆ ಶ್ರದ್ಧೆಯಿಂದ ಬೇಡಿಕೊಳ್ಳುತ್ತಿದ್ದರು. ಅವರು ಬ್ರಿಟಿಶ್ ವೈಸರಾಯಿ ಮತ್ತು ಅತನ ದಾಸರಿಗೆ ಪತ್ರಗಳನ್ನು ಬರೆದರು ಯುದ್ಧಕಾಲದಲ್ಲಿ ಲಂಡನ್, ಪ್ಯಾರೀಸ್ ಮತ್ತು ಅಲ್ಲಿಯ ಸ್ಮಾರಕಗಳು ನಾಶವಾಗುವ ಸಾಧ್ಯತೆಯ ಬಗ್ಗೆ "ದುಃಖ" ವ್ಯಕ್ತಪಡಿಸಿದರು.

1939 ರ ಸೆಪ್ಟಂಬರ್‌ನ ಮೊದಲ ವಾರದಲ್ಲಿ ಬ್ರಿಟಿಶ್ ವೈಸರಾಯ್ ಲಾರ್ಡ್ ಲಿನ್‌ಲಿತ್‌ಗೋನನ್ನು ಭೇಟಿಯಾದ ಗಾಂಧೀಜಿ ಸೆಪ್ಟಂಬರ್ 5 ರಂದು ಸಿಮ್ಲಾದಲ್ಲಿ ಒಂದು ಸುದೀರ್ಘ ಹೇಳಿಕೆ ನೀಡಿದರು—"ಕಾಂಗ್ರೆಸ್‌ಗೆದುರಾಗಿ ನನ್ನ ನಿಲುವನ್ನು ಸ್ಪಷ್ಟಪಡಿಸಿದ ಮೇಲೆ ನನ್ನ ಸ್ವಂತ ಸಹಾನುಭೂತಿ ಇಂಗ್ಲೆಂಡ್ ಮತ್ತು ಫ್ರಾನ್ಸ್ ಪರವಾಗಿದೆ —ಶುದ್ಧ ಮಾನವೀಯ ಕಾರಣಗಳಿಗಾಗಿ ಎಂದು ಘನತೆವೆತ್ತ ವೈಸರಾಯರಿಗೆ ನಾನು ಹೇಳಿದೆ. ಇದುವರೆಗೆ ಅಭೇದ್ಯವೆಂದು ಬಗೆದಿದ್ದ ಲಂಡನ್‌ನ ವಿನಾಶದಿಂದ ನಾನು ಆಳವಾಗಿ ಕಲಕಿಕೊಳ್ಳಗದಿರಲು ಸಾಧ್ಯ ಎಂದು ಯೋಚಿಸುವುದೇ ಅಶಕ್ಯ ನಾನು ಅವರ

ಮುಂದೆ ಪಾರ್ಲಿಮೆಂಟ್ ಭವನದ ವೆಸ್ಟ್ ಮಿನಿಸ್ಟರ್ ಅಬ್ಬೇಯ ನಾಶದ ಸಾಧ್ಯತೆಯ ಚಿತ್ರಣ ಮೂಡಿಸುತ್ತಿದ್ದೆ. ನಾನು ಅತ್ತು ಬಿಟ್ಟೆ ನನ್ನನ್ನು ಸಮಾಧಾನ ಪಡಿಸುವುದು ಸಾಧ್ಯವಿಲ್ಲ. ಇಂತಹ ಸಂಗತಿ ನಡೆಯುತ್ತಾ ಹೋಗಲು ಬಿಡುತ್ತಾನಲ್ಲ ಎಂದು ದೇವರೊಂದಿಗೆ ಹೃದಯದ ಅಂತರಾಳದಲ್ಲಿ ನಾನು ನಿರಂತರ ಹೋರಾಟ ನಡೆಸುತ್ತಿರುತ್ತೇನೆ.

ಬೆಲೆಯಿಲ್ಲದ ಬಿಡುಗಡೆ ?

ನಂತರ ಹಿಟ್ಲರನ ಹಾಗೂ ಆತನ ವಿನಾಶಕಾರೀ ಚಿಂತನೆ ಇತ್ಯಾದಿ ಬಗ್ಗೆ ಟೀಕಿಸುತ್ತಾ ಗಾಂಧಿ ಬರೆದ ಮಾತುಗಳಿವು— "ಆದ್ದರಿಂದ ನಾನು ಸದ್ಯದ ಸಂದರ್ಭದಲ್ಲಿ ಭಾರತದ ಬಿಡುಗಡೆಯ ಯೋಚನೆ ಮಾಡುತ್ತಿಲ್ಲ. ಅದು ಬರಲಿದೆ. ಆದರೆ ಜತೆಗೆ ಇಂಗ್ಲೆಂಡ್ ಮತ್ತು ಫ್ರಾನ್ಸ್ ಪತನ ಹೊಂದಿದರೆ ಅಥವಾ ವಿನಾಶಹೊಂದಿ, ಪ್ರತಿಷ್ಠೆಕಳಕೊಂಡು ಜರ್ಮನಿಯ ವಿರುದ್ಧ ವಿಜಯಶಾಲಿಯಾಗಿ ಬಂದರೆ ಏನು ಬೆಲೆ ಅದಕ್ಕೆ. ?"

ನಂತರ ಇಂಗ್ಲೆಂಡಿನ ನಗರಗಳ ಬಗ್ಗೆ ಗಾಂಧೀಜಿಯ ಆತಂಕ ಮತ್ತು ಜರ್ಮನ್ ನಗರಗಳ ಬಗ್ಗೆ ನಿರಾತಂಕದ ಆಪಾದನೆ ಇತ್ಯಾದಿಗಳ ಬಗ್ಗೆ ಒಬ್ಬ ಪತ್ರಿಕಾ ಪ್ರತಿನಿಧಿಯ "ಆವೇಶಪೂರ್ಣ ಪ್ರತಿಭಟನೆ" ಯಿಂದ ಕುಟುಕಿದಂತಾದ ಮಹಾತ್ಮರು ಸಪ್ಟಂಬರ್ 16, 1939ರ "ಹರಿಜನ್"ನಲ್ಲಿ "ಸಹಾನುಭೂತಿಯ ಮೂಲಗಳು" ಎಂಬ ಶಿರೋನಾಮೆಯ ಲೇಖನದಲ್ಲಿ ಹೀಗೆ ಬರೆದರು—" ಜರ್ಮನಿಯ ಸ್ಮಾರಕಗಳ ವಿನಾಶದ ಸಾಧ್ಯತೆಯ ಯೋಚನೆಯಿಂದಲೂ ನಾನು ಅಷ್ಟೇ ವಿಚಲಿತನಾಗಬೇಕು. ಹೆರ್ ಹಿಟ್ಲರ್‌ಗೆ ನನ್ನ ಸಹಾನುಭೂತಿಯ ಆವಶ್ಯಕತೆಯಿದೆ. ಸದ್ಯದ ಯೋಗ್ಯತೆಗಳನ್ನು ಅಳೆಯುವಾಗ ಗತಕಾಲದ ಇಂಗ್ಲೆಂಡಿನ ದುಷ್ಕೃತ್ಯಗಳು ಮತ್ತು ಜರ್ಮನಿಯ ಒಳ್ಳೆಯ ಕೆಲಸಗಳು ಅಪ್ರಸ್ತುತ, ಸರಿಯೋ ಅಥವಾ ತಪ್ಪೋ, ಇಂತಹ ಸಂದರ್ಭಗಳಲ್ಲಿ ಬೇರೆ ಶಕ್ತಿಗಳು ಈ ಹಿಂದೆ ಏನೇ ಮಾಡಿರಬಹುದು, ಆದರೆ ಹೆರ್ ಹಿಟ್ಲರ್ ಯುದ್ಧಕ್ಕೆ ಕಾರಣ ಎಂಬ ನಿರ್ಣಯಕ್ಕೆ ನಾನು ಬಂದಿದ್ದೇನೆ.

ಬೂರ್ಜ್ವಾ ರಾಷ್ಟ್ರೀಯವಾದಿಗಳಂತಲ್ಲದೆ ಭಾರತೀಯ ಕಮ್ಯುನಿಸ್ಟರು ಆರಂಭದಿಂದಲೇ ಸಾಮ್ರಾಜ್ಯಶಾಹೀ ಯುದ್ಧ ಉಂಟು ಮಾಡಿರುವ ಪರಿಸ್ಥಿತಿ ಬ್ರಿಟಿಷ್ ಸಾಮ್ರಾಜ್ಯಶಾಹಿಗೆ ಬಲವಾದ ಏಟುಕೊಟ್ಟು ನಮ್ಮ ಮಾತೃಭೂಮಿಯನ್ನು ವಿಮೋಚನಗೊಳಿಸುವ ಮಹಾ ಅವಕಾಶವೊಂದನ್ನು ಕೊಟ್ಟಿದೆ ಎಂಬುದನ್ನು ಕಂಡರು. ಎರಡು ಬೇರೆ ಬೇರೆಯಾದ ಪ್ರತಿಕ್ರಿಯೆಗಳು ಮತ್ತು ಅಭಿಪ್ರಾಯಗಳನ್ನು ಎಲ್ಲರೂ ಕಾಣಬಹುದಾಗಿತ್ತು. ಅವು ಮೂಡಿಬಂದದ್ದು ಎರಡು ಪರಸ್ಪರ ಭಿನ್ನವಾದ ವರ್ಗದೃಷ್ಟಿಕೋನಗಳಿಂದ, ಕಾಂಗ್ರೆಸ್ ನಾಯಕರೂ ಕೂಡ "ಸಾಮ್ರಾಜ್ಯಶಾಹಿ ಡಕಾಯಿತರು" ಎಂದು ವರ್ಣಿಸಿದ ಗುಂಪುಗಳು ಪರಸ್ಪರ ಕತ್ತು ಹಿಸುಕುತ್ತಿದ್ದ ಸಾಮ್ರಾಜ್ಯಶಾಹೀ ಯುದ್ಧಕ್ಕೆ ಸಂಬಂಧಪಟ್ಟಂತೆ ಎರಡು ಪರಸ್ಪರ ವಿರುದ್ಧವಾದ ರಾಜಕೀಯ, ಮತ್ತು ಕಾರ್ಯಾಚರಣೆಯ ವಿಧಾನಗಳಿಂದಾಗಿ.

ಆದರೆ ಕಾಂಗ್ರೆಸ್ ನಾಯಕತ್ವ ಮತ್ತು ಮುಖ್ಯವಾಗಿ ಗಾಂಧೀಜಿಗೆ ಮೂರು ವರ್ಷಗಳ ಕಾಲ ಬ್ರಿಟಿಷರು "ಭಾರತ ಬಿಟ್ಟು ತೊಲಗು"ವಂತೆ ಮಾಡುವ ಯಾವುದೇ ಪರಿಣಾಮಕಾರಿಯಾದ ನೇರ ಸಾಮೂಹಿಕ ಕಾರ್ಯಾಚರಣೆ ಬೇಡವಾಗಿತ್ತು; ಬ್ರಿಟಿಷ್ ವೈಸ್‌ರಾಯ್‌ಗಳಿಗೆ ಮನವಿಗಳ ರಾಜೀ ಒಪ್ಪಂದಕ್ಕಾಗಿ ಬ್ರಿಟಿಷ್ ಸಾಮ್ರಾಜ್ಯಶಾಹಿಯನ್ನು ಬೇಡಿಕೊಳ್ಳುವ ಮಾರ್ಗವೇ ಅವರಿಗೆ ಬೇಕೆನಿಸಿತ್ತು.

ನಾವು, ಕಮ್ಯುನಿಸ್ಟರು, ಕಾಂಗ್ರೆಸ್ ಕಾರ್ಯನೀತಿಗಳನ್ನು ಒಪ್ಪಿಕೊಳ್ಳಲಿಲ್ಲ; ಅವು ಸುಧಾರಣಾವಾದಿ. ವಿಳಂಬಕಾರೀ ಹಾಗೂ ರಾಜೀ ಮನೋಭಾವದಿಂದ ಕೂಡಿವೆಯೆಂದು ಹೇಳಿದೆವು. ನಮ್ಮ ಸಾಹಿತ್ಯದಲ್ಲಿ, ನಮ್ಮ ಸಾಮೂಹಿಕ ಪ್ರಭಾವವಿದ್ದಲ್ಲಿ ಈ ನಿಲುವು ನಿಜವಾಗಿಯೂ ಸಾಮ್ರಾಜ್ಯಶಾಹೀ ಅಳರಸರೊಂದಿಗೆ ರಾಜಿಮಾಡಿಕೊಂಡರೆ ತಂತಾನೇ ಸಾಮ್ರಾಜ್ಯಶಾಹಿಯಿಂದ ಸ್ವಾತಂತ್ರ್ಯ ಸಿಗಬಹುದೆಂಬ ಸಂಕಲ್ಪನೆಯನ್ನಾಧರಿಸಿದ್ದರಿಂದ ಹೇಗೆ ಭಾರತೀಯ ಜನತೆಯ ಹಿತಾಸಕ್ತಿಗಳಿಗೆ ತದ್ವಿರುದ್ಧವಾಗಿದೆಯೆಂಬುದನ್ನು ಬಯಲಿಗೆಳೆದೆವು.

ಸೋವಿಯತ್ ಸಂಘ ಯುದ್ಧವನ್ನು ಪ್ರವೇಶಿಸಿ ರಷ್ಯಾ, ಬ್ರಿಟನ್, ಅಮೇರಿಕಾ ಸಂಸ್ಥಾನಗಳು ಮತ್ತು ಇತರ ಮಿತ್ರರು ಒಂದು ಫ್ಯಾಸಿಸ್ಟ್-ವಿರೋಧಿ ಸಮ್ಮಿಶ್ರ ರಂಗ ಸ್ಥಾಪಿಸಿಕೊಂಡ ನಂತರ ರಾಜಕೀಯ ಕಾರ್ಯ ವಿಧಾನಗಳನ್ನು ಬದಲಿಸಬೇಕೆಂಬ ಪ್ರಸ್ತಾಪವನ್ನು ಕಮ್ಯುನಿಸ್ಟರು ಮಂಡಿಸಿದಾಗ ಕಾಂಗ್ರೆಸ್ ನಾಯಕರು ಮತ್ತು ಇತರ ಪಕ್ಷ ಕಮ್ಯುನಿಸ್ಟ್ ವಿರೋಧಿಗಳು ಕೆಸರೆರಚುವ ಆಂದೋಲನವನ್ನೇ ಆರಂಭಿಸಿದರು.

ಮೂಲಭೂತ ಬದಲಾವಣೆ

ನಾವು ನಮ್ಮ ರಾಜಕೀಯ-ಕಾರ್ಯತಂತ್ರಾತ್ಮಕ ನಿಲುವನ್ನು ಈ ರೀತಿ ಏಕೆ ಬದಲಿಸಿಕೊಳ್ಳಬೇಕಾಗಿ ಬಂತು ? ಸೋವಿಯೆತ್ ಸಂಘ ಫ್ಯಾಸಿಸ್ಟ್-ವಿರೋಧಿ ಸಮ್ಮಿಶ್ರ ರಂಗವನ್ನು ಪ್ರವೇಶಿಸಿದ್ದು ಆಗಿನ ಸಂದರ್ಭದಲ್ಲಿ ನಿರ್ಣಾಯಕವಾಗಿದ್ದರೂ ಕೂಡ ಇದು ಯುದ್ಧ ಪರಿಸ್ಥಿತಿಯಲ್ಲಿ ಆಗ ಕಂಡು ಬಂದ ಬದಲಾವಣೆಯ ಒಂದು ಅಂಶ ಮಾತ್ರವಾಗಿತ್ತು. ಒಂದು ವರ್ಷದೊಳಗೇ ಮಧ್ಯ ಮತ್ತು ಪೂರ್ವ ಯುರೋಪ್ ಪೂರ್ಣವಾಗಿ ಫ್ಯಾಸಿಸ್ಟರ ಅಧೀನವಾಗಿತ್ತು; 1940ರ ಜೂನ್ ಮೊದಲೇ ಅಂದರೆ ನಾಝಿ ಜರ್ಮನಿ ಯುದ್ಧಕ್ಕೆ ತೊಡಗಿದ ಒಂಭತ್ತು ತಿಂಗಳಲ್ಲೇ ಫ್ರೆಂಚರು ಶರಣಾಗತರಾಗಿ ಬಿಟ್ಟಿದ್ದರು, ಗ್ರೇಟ್ ಬ್ರಿಟನ್ನಂತೂ ನಾಝೀ ಯುದ್ಧ ವಿಮಾನಗಳ ಮಾರಕ ಬಾಂಬು ದಾಳಿಗಳಿಂದಾಗಿ ಸಂಪೂರ್ಣ ಮುತ್ತಿಗೆಗೊಳಪಟ್ಟಿತು, ಅಮೆರಿಕಾ ಸಂಸ್ಥಾನಗಳು 1941ರ ಡಿಸೆಂಬರ್ ಪರ್ಲ್‌ಹಾರ್ಬರ್‌ನ ಮೇಲಿನ ದಾಳಿಯಿಂದಾಗಿ ಜಪಾನೀ ಫ್ಯಾಸಿಸಂಗೆ ತಲೆಬಾಗಬೇಕಾಗಿ ಬಂದಿತ್ತು. ಆಗ್ನೇಯ ಏಷ್ಯಾದ ದೇಶಗಳ ಅತಿಕ್ರಮಣ ಆಫ್ರಿಕಾ ಖಂಡದೊಳಗೆ ರೊಮೆಲ್‌ನ ಸೇನೆಯ ಪ್ರವೇಶ ಜಾಗತಿಕ ಫ್ಯಾಸಿಸ್ಟ್ ಅಕ್ಷ ಜಗತ್ತನ್ನೇ ಗೆಲ್ಲುವ ತನ್ನ ಧ್ಯೇಯಸಾಧನೆಗೆ ಮುನ್ನುಗ್ಗಿದ್ದು ಮತ್ತು 1941ರ ಜೂನ್‌ನಲ್ಲಿ ಸೋವಿಯೆಟ್ ಸಂಘದ ಮೇಲೆ ನಾಝೀ ಮಂದೆಗಳ ದಾಳಿ-ಇವೆಲ್ಲಾ ಒಟ್ಟಾಗಿ ಯುದ್ಧದ ಸ್ವಭಾವವನ್ನು ಮತ್ತು ಜಗತ್ತಿನ ಜನತೆಗಳ ಮತ್ತು ದೇಶಗಳ ಮೇಲಿನ ಅದರ ಸ್ವರೂಪವನ್ನು ಮೂಲ ಭೂತವಾಗಿಯೇ ಬದಲಿಸಿದವು.

> ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಮುಂದಾಳು ಗಾಂಧಿ ಜರ್ಮನ್ ನಾಝಿವಾದ, ಇಟಾಲಿಯನ್ ಫ್ಯಾಸಿಸಂ ಮತ್ತು ಜಪಾನಿ ಸೈನಿಕ ವಾದದ ಬೆಳವಣಿಗೆಯನ್ನು ಖಂಡಿಸುತ್ತಾ ಬ್ರಿಟನ್, ರಷ್ಯಾ, ಚೀಣಾ ಮತ್ತು ಫ್ರಾನ್ಸಿನ ವಾದಕ್ಕೆ ಸಹಾನುಭೂತಿ ವ್ಯಕ್ತಪಡಿಸುತ್ತಾರೆ. ಮತ್ತು ಫ್ಯಾಸಿಸ್ಟ್ ಆಕ್ರಮಣಕಾರರ ಕೈಯಲ್ಲಿ ಬ್ರಿಟಿಷ್ ಪಾರ್ಲಿಮೆಂಟ್ ಭವನ ವೆಸ್ಟ್ ಮಿನಿಸ್ಟರ್ ಅಬೇ ಹಾಗೂ ಇತರ ಸ್ಮಾರಕಗಳ ವಿನಾಶದ ಬಗ್ಗೆ ತೀವ್ರ ಆತಂಕ ಹಾಗೂ ಭಯ ತೋರ್ಪಡಿಸುತ್ತಾರೆ. ಆದರೆ ಜರ್ಮನಿ, ಇಟಲಿ ಮತ್ತು ಜಪಾನಿನ ಕರಾಳ ಶಕ್ತಿಗಳ ವಿರುದ್ಧ ನಡೆಯುತ್ತಿರುವ ಯುದ್ಧವನ್ನು ಫ್ಯಾಸಿಸ್ಟ್—ವಿರೋಧೀ ಜಾಗತಿಕ ಯುದ್ಧ, ಜನತಾ ಯುದ್ಧ ಮತ್ತು ಫ್ಯಾಸಿಸ್ಟ್ ದಾಸ್ಯದ ಬೆದರಿಕೆಯಿಂದ ಸಮಸ್ತ ಮಾನವ ಕುಲದ ವಿಮೋಚನೆಯ ಯುದ್ಧ ಎಂದು ಹೇಳಿದರೆ ಅದಕ್ಕೆ ಅಸಹ್ಯ ಪಡುತ್ತಾರೆ !

ಫ್ಯಾಸಿಸ್ಟ್ ಜರ್ಮನಿ ಮತ್ತು ಬ್ರಿಟನ್ ಮುಖಂಡತ್ವದ ಸಾಮ್ರಾಜ್ಯಶಾಹಿ ಶಕ್ತಿಗಳ ನಡುವಿನ ಯುದ್ಧವಾಗಿ ಆರಂಭವಾದ ಈ ಯುದ್ಧ ಜರ್ಮನಿ, ಇಟಲಿ ಮತ್ತು ಜಪಾನಿನ ಫ್ಯಾಸಿಸ್ಟ್ ಅಕ್ಷದ ವಿರುದ್ಧ ಜಗತ್ತಿನ ದಾಸ್ಯಪೀಡಿತ ಸಮಸ್ತ ಜನತೆಯ ಯುದ್ಧವಾಗಿ, ಜನತಾ ವಿಮೋಚನಾ ಯುದ್ಧವಾಗಿ ಪರಿವರ್ತನೆಗೊಂಡಿತು. ಬ್ರಿಟಿಷ್ ಸಾಮ್ರಾಜ್ಯಶಾಹಿಗಳು ಮತ್ತು ಅದರ ಇತರ ಸೋಲುಂಡ ಬಂಡವಾಳಶಾಹೀ ಮಿತ್ರರೂ ಕೂಡಾ ಈ ಫ್ಯಾಸಿಸ್ಟ್-ವಿರೋಧೀ ಜಾಗತಿಕ ಶಿಬಿರ ಸೇರಲೇಬೇಕಾಗಿತ್ತು ಎಂಬುದು ಬೇರೆ ಮಾತು. ಇದೇ 1941ರ ಮಾರ್ಚಿನಂತರ ಯುದ್ಧ ಪರಿಸ್ಥಿತಿಯ ಬಗ್ಗೆ ಆಗ ಮಾರ್ಕ್ಸ್‌ವಾದಿಗಳ ತಿಳುವಳಿಕೆಯಾಗಿತ್ತು ಮತ್ತು ಈಗಲೂ ಕೂಡಾ ಅದೇ ಆಗಿದೆ. ಯುದ್ಧಸ್ಥಿತಿಯ ಪುನರ್ ಮೌಲ್ಯಮಾಪನ ಮಾಡಿ ಅದಕ್ಕನುಗುಣವಾಗಿ ನಮ್ಮ ಕಾರ್ಯತಂತ್ರಗಳನ್ನು ರೂಪಿಸಿಕೊಳ್ಳಲು ನಮಗೆ ಕೆಲವು ತಿಂಗಳು ಹಿಡಿಸಿದವು ಎಂಬುದು ನಿಜವಾದರೂ ಈ ತಿಳುವಳಿಗೆಯೇನೂ ಬದಲಾಗಿಲ್ಲ.

ವಿಶ್ಲೇಷಣೆ ಬೇಕಾಗಿದೆ

ಆದರೆ ನಾಝೀವಾದ ಮತ್ತು ಫ್ಯಾಸಿಸಂ ಕೆಡುಕಿನ ಅವತಾರ ಮತ್ತು ಯುದ್ಧ ಸಂಘಟಿಸಿದ ತತ್ತ್ವಗಳು ಎಂದು ಖಂಡಿಸುವ ಘೋಷಣೆ ಮಾಡಿದರೂ ಕೂಡಾ, 1939 ರ ಅಕ್ಟೋಬರ್, ನವಂಬರ್ ತಿಂಗಳಲ್ಲಿ ತಾವು ಸದ್ಯಕ್ಕಂತೂ ಭಾರತದ ಬಿಡುಗಡೆಯ ಯೋಚನೆ ಮಾಡುತ್ತಿಲ್ಲ" ಎಂದು ಕಾಂಗ್ರೆಸ್ ನಾಯಕರು ಒತ್ತಿ ಹೇಳಿದರೂ ಕೂಡಾ ಜಗತ್ತಿನಲ್ಲಿ ಫ್ಯಾಸಿಸಂನ ಪೀಡೆ ಹಲವು ಪಟ್ಟು ಹೆಚ್ಚಾಗಿದ್ದ 1942 ರ ಆಗಸ್ಟ್ ತಿಂಗಳಲ್ಲಿ ಅದೇ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ "ಮಾಡು ಇಲ್ಲವೆ ಮಡಿ" ಕರೆ ಏಕೆ ನೀಡಿತು ಎಂಬುದು ಭಾರತೀಯ ಇತಿಹಾಸದ ಯಾವುದೇ ವಿದ್ಯಾರ್ಥಿ ಕೂಡಾ ಗಂಭೀರವಾಗಿ ವಿಶ್ಲೇಷಿಸಬೇಕಾದ ಪ್ರಶ್ನೆ.

ಫ್ಯಾಸಿಸಂ ಮತ್ತು ನಾಝಿಸಂ ಬಗ್ಗೆ 1939 ರ ಸಪ್ಟಂಬರ್ 14 ರಂದು ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಪ್ರಣಾಳಿಕೆ ಏನು ಹೇಳಿದೆಯೆಂಬುದನ್ನು ನಾವು ಇನ್ನೊಮ್ಮೆ ಉದಾಹರಿಸುತ್ತೇವೆ—" ಫ್ಯಾಸಿಸಂ ಮತ್ತು ನಾಝಿಸಂನ ತತ್ತ್ವ ಮತ್ತು ಆಚರಣೆಯನ್ನು ಯುದ್ಧ ಮತ್ತು ಹಿಂಸೆಯನ್ನು ಅದು ಭವ್ಯೀಕರಿಸುವುದನ್ನು ಮತ್ತು ಮಾನವ ಚೇತನವನ್ನು ದಮನ ಮಾಡುವುದನ್ನು ಸಂಪೂರ್ಣವಾಗಿ ನಿರಾಕರಿಸುತ್ತದೆ ಎಂದು ಕಾಂಗ್ರೆಸ್ ಬಾರಿ ಬಾರಿಗೂ ಘೋಷಿಸಿದೆ. ಅವರು ಆಗಾಗ ತೊಡಗಿದ ಆಕ್ರಮಣಗಳನ್ನು, ಸರ್ವಮಾನ್ಯ ನೀತಿಗಳನ್ನು ಮತ್ತು ನಾಗರಿಕ ವರ್ತನೆಯ ಮಟ್ಟವನ್ನು ಕೊಚ್ಚಿಹಾಕಿರುವುದನ್ನು ಕಾಂಗ್ರೆಸ್ ಖಂಡಿಸುತ್ತಾ ಬಂದಿದೆ. ಭಾರತೀಯ ಜನತೆ ಹಲವು ವರ್ಷಗಳಿಂದ ಯಾವ ಸಾಮ್ರಾಜ್ಯಶಾಹಿಯ ವಿರುದ್ಧ ಹೋರಾಟ ನಡೆಸಿದರೋ ಅದು ಫ್ಯಾಸಿಸಂ ಮತ್ತು ನಾಝಿಸಂನಲ್ಲಿ ತೀವ್ರಗೊಂಡಿರುವುದನ್ನು ಅದು ಕಂಡಿದೆ. ಪೋಲೆಂಡ್ ಮೇಲೆ ಜರ್ಮನಿಯ ನಾಝೀ ಸರಕಾರದ ದಾಳಿಯನ್ನು ಕಾರ್ಯಕಾರೀ ಸಮಿತಿ ಹಿಂದೆ-ಮುಂದೆ ನೋಡದೆ ಖಂಡಿಸಬೇಕು. ಮತ್ತು ಆ ಆಕ್ರಮಣವನ್ನು ಪ್ರತಿರೋಧಿಸುತ್ತಿರುವವರಿಗೆ ಸಹಾನುಭೂತಿ ವ್ಯಕ್ತಪಡಿಸಬೇಕು."

ಮುಂದುವರಿದು ಪ್ರಣಾಳಿಕೆ "ಪ್ರಜಾಪ್ರಭುತ್ವದ ನಿಜವಾದ ಅಳತೆಗೋಲೆಂದರೆ ಸಾಮ್ರಾಜ್ಯಶಾಹಿ ಮತ್ತು ಫ್ಯಾಸಿಸಂ ಎರಡನ್ನೂ, ಹಿಂದೆ ಮತ್ತು ಈಗ ಅವುಗಳು ನಡೆಸಿದ ಆಕ್ರಮಣಗಳನ್ನು ಅಂತ್ಯಗೊಳಿಸುವುದೇ ಆಗಿದೆ. ಈ ಬುನಾದಿಯ ಮೇಲೆ ಮಾತ್ರ ಹೊಸದೊಂದು ವ್ಯವಸ್ಥೆಯನ್ನು ಕಟ್ಟಬಹುದು. ಆ ಹೊಸ ವ್ಯವಸ್ಥೆಯನ್ನು ಕಟ್ಟುವ ಹೋರಾಟದಲ್ಲಿ ಸರ್ವ ರೀತಿಯಿಂದಲೂ ನೆರವಾಗಲು ಕಾರ್ಯಕಾರೀ ಸಮಿತಿ ಆತುರವಾಗಿದೆ ಮತ್ತು ಅಪೇಕ್ಷೆ ಪಡುತ್ತದೆ. ಆದರೆ ಸಾಮ್ರಾಜ್ಯಶಾಹೀ ರೀತಿಯಲ್ಲಿ ನಡೆಸಲ್ಪಡುತ್ತಿರುವ ಮತ್ತು ಇಲ್ಲಿ ಮತ್ತು ಇತರೆಡೆಗಳಲ್ಲಿ ಸಾಮ್ರಾಜ್ಯಶಾಹಿಯನ್ನು ದೃಢಪಡಿಸುವ ಉದ್ದೇಶ ಹೊಂದಿದ ಒಂದು ಯುದ್ಧಕ್ಕೆ ಯಾವುದೇ ಸಹಕಾರ ನೀಡಲು ಸೇರಿಕೊಳ್ಳಲು ಸಮಿತಿ ಸಿದ್ಧವಿಲ್ಲ." ಎಂದು ಕೂಡಾ ಸೇರಿಸಿದೆ

ಕೇವಲ ಶಬ್ದಜಾಲ

ಬ್ರಿಟಿಶ್ ಸಾಮ್ರಾಜ್ಯಶಾಹೀ ಯುದ್ಧ ಪ್ರಯತ್ನಗಳಿಗೆ ಕಾಂಗ್ರೆಸ್ಸಿನ ವಿರೋಧ ಕೇವಲ ಬ್ರಿಟಿಶ್ ವೈಸರಾಯ್ ಮತ್ತು ಆತನ ಅಧಿಕಾರಶಾಹಿಯೊಂದಿಗೆ ನಡೆಸಿದ ಶಬ್ದಜಾಲಗಳ ಯುದ್ಧವಾಗಿತ್ತಷ್ಟೆ. ಈ ಬಗ್ಗೆ ಗಾಂಧಿ ಮತ್ತು ವೈಸ್‌ರಾಯ್ ನಡುವಿನ ಪತ್ರ ವಿನಿಮಯ ಎಷ್ಟೊಂದಿತ್ತೆಂದರೆ ಮಹಾತ್ಮಾಗಾಂಧಿಯವರ ಸಂಕಲಿತ ಕೃತಿಗಳ ಎರಡು ಸಂಪುಟಗಳೇ ಅದಕ್ಕೆ ಬೇಕಾದುವು. ಆದರೆ ಬ್ರಿಟಿಶ್ ಯುದ್ಧ ಪ್ರಯತ್ನಗಳೊಂದಿಗೆ ಅಸಹಕಾರದ ಘೋಷಣೆಯನ್ನು ಕಾರ್ಯರೂಪಕ್ಕಿಳಿಸಲು ಮೂರು ವರ್ಷಗಳ ಕಾಲ 1942 ರ ಆಗಸ್ಟ್ 8 ರಂದು "ಕ್ವಿಟ್ ಇಂಡಿಯಾ" ನಿರ್ಣಯ ಕೈಗೊಳ್ಳುವವರೆಗೆ ಪರಿಣಾಮಕಾರಿಯಾದ ಯಾವುದೇ ಪ್ರಯತ್ನ ನಡೆಯಲಿಲ್ಲ.

ತನಿಖಾತ್ಮಕ ಸಂಶೋಧಕ ಶ್ರೀಮಾನ್ ಶೌರಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಈ ರೀತಿ ಕಾಲೆಳೆದು ಹಿಂಜರಿಯಿತು ಏಕೆ ಎಂಬುದಕ್ಕೆ ಒಂದೇ ಒಂದು ಶಬ್ದ ಉಸುರಿಲ್ಲ. ಅಷ್ಟೇ ಅಲ್ಲ ಬ್ರಿಟಿಶ್ ಆಳ್ವಿಕೆಯ ಮುಂದುವರಿಕೆಯನ್ನು ತೀವ್ರವಾಗಿ ವಿರೋಧಿಸಬೇಕೆಂದು ಹೇಳುತ್ತಿದ್ದ, ಅದರಿಂದಾಗಿ ಸಾವಿರಾರು ಸಂಖ್ಯೆಯಲ್ಲಿ ಜೈಲಿಗೆಸೆಯಲ್ಪಟ್ಟ, ಗುಪ್ತ ಜೀವನ ನಡೆಸಬೇಕಾಗಿ ಬಂದ ಕಮ್ಯುನಿಸ್ಟರ ಪಾತ್ರವನ್ನು ಸ್ವೀಕರಿಸುವ, ಮೆಚ್ಚುಗೆ ಸೂಸುವ ಒಂದೇ ಒಂದು ಮಾತು ಕೂಡಾ ಇಲ್ಲ.

1939-42 ರ ಅವಧಿಯಲ್ಲಿ ನಿಷ್ಕ್ರಿಯರಾಗಿದ್ದು 1942 ರಲ್ಲಿ ಇದ್ದಕ್ಕಿದ್ದಂತೆ ಸಮರಶೀಲ ನಿಲುವು ತಳೆದ ಕಾಂಗ್ರೆಸ್ ಕಾರ್ಯತಂತ್ರಕ್ಕೆ ನೀಡ

(6ನೇ ಪುಟ ನೋಡಿ)

ಪಂಜಾಬ್ ಬಿಕ್ಕಟ್ಟಿನ ಪರಿಳಿವುಗಳು ಹಾಗೂ ತಿರುವುಗಳು

[3ನೇ ಪುಟದಿಂದ]

ಯೋಗ ಪಡಿಸಿಕೊಳ್ಳುವಲ್ಲಿ ಸರಕಾರ ವಿಫಲವಾಯಿತು. ಅಕಾಲಿಗಳೊಡನೆ ಸಂಪರ್ಕ ಸ್ಥಾಪಿತವಾದದ್ದು ನವೆಂಬರ್ 17 ರಂದು ಮಾತ್ರ. ಅಕಾಲಿಗಳು ಕಳೆದ ಸಮರ್ಪಕ ನಿಲುವಿನ ಪರಿಣಾಮವಾಗಿ ನವೆಂಬರ್ 18 ರ ಸಂಜೆ ಮತ್ತೊಮ್ಮೆ ಒಪ್ಪಂದಕ್ಕೆ ಬರಲಾಯಿತು. ಅಮೃತಸರಕ್ಕೆ ಹೋಗಲು ಆ ದಿವಸ ಒಂದು ವಿಮಾನವನ್ನೂ ಸಿದ್ಧಪಡಿಸಲಾಗಿತ್ತು. ಈ ಒಪ್ಪಂದದಿಂದ ಹಿಂದೆ ಸರಿದವರಾರು ? ಸರಕಾರವೇ ಇದಕ್ಕೆ ಕಾರಣ.

ತದನಂತರದ ಅವಧಿಯಲ್ಲಿ ಏಶಿಯನ್ ಕ್ರೀಡಾಕೂಟ ಪ್ರಾರಂಭವಾಗುವ ಮುನ್ನ ಅಕಾಲಿಗಳು ಮೋರ್ಚಾ ಘೋಷಿಸಿದಾಗ ಪಂಜಾಬ್, ಹರಿಯಾಣ, ಉತ್ತರ ಪ್ರದೇಶ ಮತ್ತು ರಾಜಾಸ್ಥಾನ್‌ದಿಂದ (ದೆಹಲಿಯತ್ತ) ಪಯಣಿಸುವ ಎಲ್ಲಾ ಸಿಖ್‌ರನ್ನು ತಪಾಸಿಸುವ, ತೊಂದರೆಗೀಡು ಮಾಡುವ ಹಾಗೂ ಅವಮಾನಿಸುವ ಕ್ರಮಗಳನ್ನು ಸರಕಾರ ಕೈಗೊಂಡಿತು. ಹೈಕೋರ್ಟ್ ನ್ಯಾಯಾಧೀಶರು ಮತ್ತು ಉನ್ನತ ಅಧಿಕಾರಿಗಳು ಕೂಡಾ ಇಂಥ ಕ್ರಮಗಳಿಗೆ ಹೊರತಾಗಿರಲಿಲ್ಲ. ಈ ಸಿಖ್ ಜನ ಭಾರತದ ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ಸಂಚರಿಸುವುದಲ್ಲ, ಒಂದು ದೇಶದಿಂದ ಇನ್ನೊಂದು ದೇಶಕ್ಕೆ ಪ್ರವೇಶಿಸುತ್ತಾರೋ ಎಂಬ ರೀತಿಯಲ್ಲಿ ಪರಿಶೀಲಿಸಲಾಗುತ್ತಿತ್ತು. ಸರಕಾರದ ಇಂಥ ಕ್ರಮಗಳು ಅಕಾಲಿ ಧುರೀಣತ್ವದಲ್ಲಿ ಸೌಮ್ಯವಾದಿಗಳ ಪ್ರತಿಷ್ಠೆ ಕುಗ್ಗಿ ಉಗ್ರವಾದಿಗಳ ಸ್ಥಿತಿ ಬಲಗೊಳ್ಳಲು ಸಹಾಯಕಾರಿಯಾಗಿ ಪರಿಣಮಿಸಿದವು.

ತಡ ಮಾಡುವ ತಂತ್ರಗಳು

ಏಶಿಯನ್ ಕ್ರೀಡಾಕೂಟದ ನಂತರ ಸರಕಾರ ಮತ್ತೊಮ್ಮೆ ಅಕಾಲಿಗಳೊಡನೆ ನೇರ ಸಂಧಾನಕ್ಕೆ ಮುಂದಾಯಿತು. ಮಂತ್ರಿಮಂಡಲ ಉಪಸಮಿತಿಯೊಂದು ರಚಿತವಾಗಿ ಹಲವಾರು ಸುತ್ತಿನ ಮಾತುಕತೆಗಳೂ ನಡೆದವು. ಆದರೆ ಹಿಂದೆ ಸ್ವರ್ಣಸಿಂಗ್ ಕೈಬಿಟ್ಟಲ್ಲಿಂದ ಸಮಸ್ಯೆಯ ಎಳೆಯನ್ನು ಕೈಗೆತ್ತಿಕೊಳ್ಳುವ ಔಚಿತ್ಯವನ್ನು ಸರಕಾರ ಮನಗಾಣದೆ ಹೋಗಿ ಎಲ್ಲವೂ ಹೊಸದಾಗಿಯೇ ಪ್ರಾರಂಭವಾದ್ದರಿಂದ ಮಾತುಕತೆ ಮತ್ತೆ ಮುರಿದು ಬಿದ್ದವು.

ವಿರೋಧಿ ಪಕ್ಷಗಳನ್ನು ವಿಶ್ವಾಸದಲ್ಲಿ ತೆಗೆದುಕೊಳ್ಳುವ ಅಗತ್ಯ ಸರಕಾರಕ್ಕೆ ಕಂಡದ್ದು ಈ ಎಲ್ಲ ಬೆಳವಣಿಗೆಗಳ ನಂತರವೇ. ಮುರಿದು ಹೋದ ಮಾತುಕತೆಗಳ ವರದಿಒಪ್ಪಿಸುವದಕ್ಕಾಗಿ ಸಭೆಯೊಂದನ್ನು ಕರೆದು ವಿರೋಧ ಪಕ್ಷಗಳನ್ನು ಆಹ್ವಾನಿಸಲಾಯಿತು. ಸಮಸ್ಯೆಗೆ ಪರಿಹಾರ ಹುಡುಕುವಲ್ಲಿ ವಿರೋಧ ಪಕ್ಷಗಳ ಸಹಕಾರ ಮೂಡಿಸುವ ಉದ್ದೇಶದಿಂದ ಕರೆಯಲಾದ ಸಭೆ ಇದಾಗಿರಲಿಲ್ಲ. ಈ ಸಭೆಯ ಉದ್ದೇಶ ಅಕಾಲಿಗಳ ಅಸಮರ್ಥನೀಯತೆಯನ್ನು ತಿಳಿಯಪಡಿಸುವದಾಗಿತ್ತು.

ಅಕಾಲಿಗಳು ಒತ್ತಾಯಿಸುತ್ತಿದ್ದ ಆನಂದಪುರ ಸಾಹಿಬ್ ಗೊತ್ತುವಳಿಯನ್ನು ತಾವು ಅನುಮೋದಿಸುವದಿಲ್ಲವೆಂದು ಪ್ರಧಾನಮಂತ್ರಿ ಈ ಸಭೆಯಲ್ಲಿ ತಿಳಿಯಪಡಿಸಿದರು. ಈ ನಿಲುವನ್ನು ವಿರೋಧ ಪಕ್ಷಗಳು ಸಂಪೂರ್ಣವಾಗಿ ಮಾನ್ಯ ಮಾಡಿದರೂ ಅಕಾಲಿಗಳ ಅಭಿಪ್ರಾಯವು ಪ್ರತಿನಿಧಿತವಾಗಲು ಹಾಗೂ ಸಮಸ್ಯೆಗೆ ಪರಿಹಾರ ಕಂಡುಹಿಡಿಯುವಲ್ಲಿ ವಿರೋಧ ಪಕ್ಷಗಳೂ ಪಾತ್ರವಹಿಸಲು ಸಾಧ್ಯವಾಗುವಂತೆ ತ್ರಿಪಕ್ಷೀಯ ಸಮಾವೇಶವೊಂದನ್ನು ಕರೆಯಬೇಕೆಂಬ ಬೇಡಿಕೆಯನ್ನು ಮುಂದಿಟ್ಟವು. ಪ್ರಧಾನ ಮಂತ್ರಿ ವಿರೋಧ ಪಕ್ಷಗಳ ಒಮ್ಮತದ ಬೇಡಿಕೆಗೆ ಒಪ್ಪಿಕೊಂಡು ಜನವರಿ 1983 ರಂದು ತ್ರಿಪಕ್ಷೀಯ ಸಭೆ ಕರೆಯಲಾಯಿತು.

ಸಮಸ್ಯೆಪರಿಹಾರಕ್ಕೆ ಸರಕಾರದಿಂದ ಅಡ್ಡಿ

ಸಿಖ್ ಸಮುದಾಯದ ಧಾರ್ಮಿಕ ಬೇಡಿಕೆಗಳನ್ನು ಒಪ್ಪಿಕೊಂಡಿದ್ದಾಗಿ ಸರಕಾರವೇ ಘೋಷಿಸಿತು. ಪಂಜಾಬಿಗಳೆಲ್ಲರಿಗೂ ಸಂಬಂಧಿಸಿದ ಬೇಡಿಕೆಗಳ ಚರ್ಚೆಮಾತ್ರ ಬಾಕಿ ಇತ್ತು. ಅಜೆಂಡಾದಲ್ಲಿ ಆನಂದಪುರ್ ಗೊತ್ತುವಳಿ ಸೇರಿಸುವ ಪ್ರಯತ್ನವನ್ನು ತ್ಯಜಿಸುವಂತೆ ವಿರೋಧ ಪಕ್ಷಗಳು ಅಕಾಲಿಪ್ರತಿನಿಧಿಗಳ ಮನವೊಲಿಸಿದರು. ವಿರೋಧ ಪಕ್ಷಗಳು ಕೇಂದ್ರ-ರಾಜ್ಯಗಳ ಸಂಬಂಧದ ಪುನರ್ರಚನೆಯ ಪರಿಶೀಲನೆಗೆ ತೃಪ್ತಗೊಂಡವು. ನದಿ ನೀರಿನ ವಿವಾದಕ್ಕೆ ಸಂಬಂಧಿಸಿಯೂ ಒಂದು ಒಪ್ಪಂದಕ್ಕೆ ಬರಲಾಯಿತು.

ಇನ್ನುಳಿದಿದ್ದ ಒಂದೇ ಒಂದು ಪ್ರಮುಖ ಸಮಸ್ಯೆಯೆಂದರೆ ಪ್ರಾದೇಶಿಕ ವಿವಾದದ್ದು. ಈ ಬೇಡಿಕೆಗೆ ಸಂಬಂಧಿಸಿದಂತೆ ಚಂಡೀಗಢ್ ಅನ್ನು ಪಂಜಾಬಿಗೆ ಹಸ್ತಾಂತರಿಸಿ ಪಂಜಾಬಿನ ಹಿಂದಿ ಭಾಷಿಕ ಪ್ರದೇಶವೊಂದನ್ನು ಪರಿಹಾರ ರೂಪದಲ್ಲಿ ಹರಿಯಾಣಕ್ಕೆ ವರ್ಗಾಯಿಸಿ ಹೊಸ ರಾಜಧಾನಿಯ ನಿರ್ಮಾಣಕ್ಕೆ ಸಾಕಾಗುವಷ್ಟು ಹಣಕಾಸಿನ ನೆರವು ನೀಡಬೇಕೆಂದು ವಿರೋಧ ಪಕ್ಷಗಳು ಸೂಚಿಸಿದವು. ಆದರೆ ಫಜಿಲ್ಕಾ ಅಬೋಹರ್‌ನನ್ನು ಹರಿಯಾಣಕ್ಕೆ ಹಸ್ತಾಂತರಿಸುವಂತಾದರೆ ಮಾತ್ರ ಚಂಡೀಗಢ್ ಪಂಜಾಬಿಗೆ ಹೋಗುವದು ಸಾಧ್ಯವೆಂಬರ್ಥದ 1970 ರ ನಿರ್ಣಯಕ್ಕೆ ಸಂಪೂರ್ಣವಾಗಿ ಅಂಟಿಕೊಳ್ಳುವ ತನ್ನ ನಿರ್ಧಾರದಿಂದ ಸರಕಾರ ಒಂದಂಗುಲ ಕೂಡ ಸರಿಯಲಿಲ್ಲ. ಅಂತೆಯೇ ಈ ಮಾತುಕತೆಗಳೂ ಮುರಿದು ಬೀಳಲು ಸರಕಾರವೇ ಕಾರಣವಲ್ಲದೆ ಅಕಾಲಿಗಳಲ್ಲ.

1983 ರ ಏಪ್ರಿಲ್ 20 ರಂದು ಮತ್ತೊಮ್ಮೆ ಒಪ್ಪಂದಕ್ಕೆ ಬರಲಾಯಿತು ಈ ಒಪ್ಪಂದವನ್ನು ಅನುಷ್ಠಾನಗೊಳಿಸುವ ಕ್ರಮವನ್ನು ಬದ್ಧಗೊಳಿಸುವ ಕಾರ್ಯ ಮಾತ್ರ ಬಾಕಿ ಇದ್ದಾಗ ಆ ಸಲವೂ ಸರಕಾರವೇ ಈ ಒಪ್ಪಂದವನ್ನು ಕೈಬಿಟ್ಟಿತು.

1983 ರ ಜೂನ್ 30 ರಂದು ವಿರೋಧ ಪಕ್ಷಗಳು ಗಡಿ ವಿವಾದಕ್ಕೆ ಸಂಬಂಧಿಸಿದಂತೆ ಒಮ್ಮತದ ಸೂಚನೆಯೊಂದನ್ನು ಮುಂದಿಟ್ಟವು ಚಂಡೀಗಢವನ್ನು ಪಂಜಾಬಿಗೆ ಕೊಟ್ಟು ಕೆಲ ನಿಶ್ಚಿತ ಭಾಗಗಳನ್ನು ಪಂಜಾಬಿನಿಂದ ಹರಿಯಾಣಕ್ಕೆ ಹಸ್ತಾಂತರಿಸಿ ಪರಿಹಾರಾರ್ಥವಾಗಿ ಹೊಸ ರಾಜಧಾನಿಯ ರಚನೆಗೆ ಹರಿಯಾಣಕ್ಕೆ ಧನಸಹಾಯ ನೀಡಬೇಕೆಂಬ ಈ ವಿರೋಧ ಪಕ್ಷಗಳ ಒಮ್ಮತದ ಸಲಹೆಯನ್ನು ಸರಕಾರ ತಿರಸ್ಕರಿಸಿತು. 1984 ಜೂನ್ 2 ರ ತನ್ನ ಬಾನುಲಿ ಪ್ರಸಾರ ಭಾಷಣದಲ್ಲಿ ಪ್ರಧಾನ ಮಂತ್ರಿ ಹೇಳಿದ್ದು ಹೆಚ್ಚು ಕಡಿಮೆ ಅದೇ ಸೂಚನೆಗಳಾಗಿವೆ

ಜೂನ್ 7 ರ "ಸ್ಟೇಟ್ಸ್‌ಮನ್" ಪತ್ರಿಕೆಯಲ್ಲಿ ಪ್ರಧಾನ ಮಂತ್ರಿಯವರ ಬಾನುಲಿ ಭಾಷಣದ ಕುರಿತು ಎಸ್. ಸಹೇಯವರು ಈ ರೀತಿ ಬರೆದಿದ್ದಾರೆ. "ಎರಡು ಮುಖ್ಯ ಬೇಡಿಕೆಗಳಾದ- ಚಂಡೀಘರ್ ಮತ್ತು ನದಿ ನೀರು- ಇವುಗಳ ಕುರಿತು ಇಂದಿರಾ ಗಾಂಧಿಯವರು ತಮ್ಮ ಸ್ಪಷ್ಟ ಅಭಿಪ್ರಾಯ ವ್ಯಕ್ತ ಮಾಡುತ್ತಾ ಹರಿಯಾಣಕ್ಕೆ ಕೆಲವು ಹಿಂದೀ ಪ್ರದೇಶಗಳನ್ನು ಪರಿಹಾರವಾಗಿ ಹಸ್ತಾಂತರಿಸಿದರೆ ಚಂಡೀಘರ್ ಪಂಜಾಬಿಗೆ ಕೊಡಬಹುದು." ಎಂದು ಹೇಳಿದ್ದಾರೆ. ಅಬೋಹರ್ ಮತ್ತು ಫಾಜಿಲ್ಕಾಗಳ ಹಸ್ತಾಂತರ ಚಂಡೀಘರ್ ಹಸ್ತಾಂತರಕ್ಕೆ ಸಂಬಂಧಪಟ್ಟಿಲ್ಲೆಂದು ಇದರರ್ಥವಾಗುತ್ತದೆ.

ಆ ಸಮಯದಲ್ಲಿ ಅಕಾಲಿಗಳು ಈ ಪರಿಹಾರ ಸೂತ್ರ ಒಪ್ಪಲು ಸಿದ್ಧರಿದ್ದರು. ವಿರೋಧ ಪಕ್ಷಗಳ ಉಪದೇಶವನ್ನು ಪ್ರಧಾನಿ ಒಪ್ಪಿಕೊಂಡಿದ್ದರೆ ಬಹಳ ಹಿಂದೆಯೇ ಪರಿಹಾರವೊಂದನ್ನು ಕಂಡು ಹಿಡಿಯಬಹುದಿತ್ತೆಂದೂ, ಸಿಖ್ ಜನತೆಯ ಧಾರ್ಮಿಕ ಭಾವನೆಗಳನ್ನು ಉದ್ವಿಗ್ನಗೊಳಿಸಿ ಜೂನ್ 6 ರ ದುರಂತಮಯ ಘಟನೆಗಳನ್ನು ತಪ್ಪಿಸಬಹುದಾಗಿತ್ತೆಂದೂ ನಾವು ಹೇಳುವುದು.

ತೀವ್ರಗಾಮಿಗಳಿಗೆ ಪ್ರೋತ್ಸಾಹ ನೀಡಿದವರಾರು ?

ಪಂಜಾಬ್ ಬಿಕ್ಕಟ್ಟಿಗೆ ರಾಜಕೀಯ ಪರಿಹಾರವೊಂದರ ಬೇಡಿಕೆಯನ್ನು ನಾವು ಮತ್ತು ವಿರೋಧ ಪಕ್ಷಗಳು ನಿರಂತರವಾಗಿ ಮುಂದಿಡುತ್ತ ಬಂದಿವೆ. ಆತಂಕವಾದಿಗಳನ್ನು ಪ್ರತ್ಯೇಕಿಸಿ ಅವರನ್ನು ರಾಜಕೀಯವಾಗಿ ಎದುರಿಸುವ ನಿಟ್ಟಿನಲ್ಲಿ ಇದು ತುಂಬ ಸಹಾಯಕಾರಿಯಾಗಬಹುದಿತ್ತು. ಮುಗ್ಧ ಜನರನ್ನು ಹತ್ಯೆ ಮಾಡುವ ಉಗ್ರವಾದಿ ಚಟುವಟಿಕೆಗಳಿಂದ ಅಕಾಲಿ ಧುರೀಣತ್ವ ತನ್ನನ್ನು ತಾನೇ ಪ್ರತ್ಯೇಕಿಸಿಕೊಂಡಿತ್ತು ಕೂಡ. ಯಾವದೇ ಪರಿಹಾರ ಕಂಡು ಹಿಡಿಯುವುದರಲ್ಲಿ ಉಗ್ರವಾದಿಗಳನ್ನೂ ಸೇರಿಸಿಕೊಳ್ಳಬೇಕು ಮತ್ತು ಅದಕ್ಕಾಗಿ ಎಲ್ಲ ಉಗ್ರವಾದಿಗಳ ಬಿಡುಗಡೆಯ ಬೆಲೆ ತೆರಲು ಸರಕಾರ ಸಿದ್ಧವಾಗಿತ್ತು.

(7ನೇ ಪುಟ ನೋಡಿ)

(5ನೇ ಪುಟದಿಂದ)

ಬಹುದಾದ ಅತ್ಯಂತ ಉದಾರವಾದ ಸಮಜಾಯಿಷಿ ಎಂದರೆ 1941-42 ರಲ್ಲಿ ಯುದ್ಧ ಪರಿಸ್ಥಿತಿಯಲ್ಲಿ ಉಂಟಾದ ಗುಣಾತ್ಮಕ ಬದಲಾವಣೆಯನ್ನು ಕಾಂಗ್ರೆಸ್ ನಾಯಕತ್ವ ಗ್ರಹಿಸಿಕೊಳ್ಳಲಿಲ್ಲ ಎಂಬುದು.

ಚೌಕಾಸಿ ಪ್ರಯತ್ನವಷ್ಟೇ

ಆದರೆ ನಮ್ಮ ಅಭಿಪ್ರಾಯದಲ್ಲಿ 1939-42 ರಲ್ಲಿ ಕಾಂಗ್ರೆಸ್ ನಾಯಕತ್ವ ತನ್ನ ಮಾತುಗಳಿಗೆ, ಫ್ಯಾಸಿಸಂ, ನಾಝಿಸಂ ಮತ್ತು ಬ್ರಿಟಿಷ್ ಸಾಮ್ರಾಜ್ಯಶಾಹಿಯ ವಿರುದ್ಧ ತನ್ನ ಕೂಗುಗಳಿಗೆ ತಕ್ಕಂತೆ ನಡೆದುಕೊಳ್ಳಲಿಲ್ಲ. ಯಾಕೆಂದರೆ 1942ರ ಪೂರ್ವದ ಅವಧಿಯಲ್ಲಾಗಲೀ 1942ರ ನಂತರದ ಅವಧಿಯಲ್ಲಾಗಲೀ ಯುದ್ಧದ ಲಕ್ಷಣ ಮತ್ತು ಸ್ವಭಾವಗಳ ಬಗ್ಗೆ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಗ್ರಹಿಕೆ ಏಕ್‌ದಂ ಸಮಯಸಾಧಕ ಮತ್ತು ಸುಧಾರಣಾ ವಾದಿಯಾಗಿದ್ದು ಯುದ್ಧಕಾಲದ ರಾಜಕೀಯ-ಕಾರ್ಯತಾಂತ್ರಿಕ ನಿಲುವನ್ನು ಕೇವಲ ಬ್ರಿಟಿಶ್‌ರಿಂದ ಸ್ವಾತಂತ್ರ್ಯ ಪಡೆಯಲು ಚೌಕಾಶಿ ವ್ಯಾಪಾರ ನಡೆಸುವ, ರಂಪ ಮಾಡುವ ಮತ್ತು ಅಂಗಲಾಚುವ ತಂತ್ರದ ಮಟ್ಟಕ್ಕೆ ಇಳಿಸಿ ಬಿಟ್ಟಿತ್ತು. "ಕ್ವಿಟ್ ಇಂಡಿಯಾ" "ಮಾಡು ಇಲ್ಲವೆ ಮಡಿ" "ಅಂತ್ಯದವರೆಗೂ ಹೋರಾಟ" ಎಂಬ ಅತಿ ತೀವ್ರಗಾಮಿ ಘೋಷಣೆಗಳ ಉದ್ದೇಶ ಕೂಡಾ ಬೆದರಿಕೆಯೊಡ್ಡುವುದೇ ಆಗಿತ್ತೇ ಹೊರತು ಅವು ಕಾರ್ಯಾಚರಣೆಗೆಂದು ನೀಡಿದ ಘೋಷಣೆಗಳಾಗಿರಲಿಲ್ಲ. ಆ ನಿರ್ಣಯವನ್ನು ಪತ್ರಿಕೆಗಳಿಗೆ ಬಿಡುಗಡೆ ಮಾಡಿ ಸಮಸ್ತ ನಾಯಕತ್ವ ತಾನಾಗಿ ಕೈಯೊಡ್ಡಿ ಬಂಧನ ಶಿಬಿರಗಳಲ್ಲಿ ಮಂದೆ—ಮಂದೆಯಾಗಿ ದೂಡಲ್ಪಟ್ಟು, ಲಕ್ಷಗಟ್ಟಲೆ ಜನ ನಾಯಕವಿಹೀನರಾದರು.

ಆ ಸಂದರ್ಭದಲ್ಲಿ ಸ್ವಯಂ ಪ್ರೇರಣೆಯು ಉಕ್ಕಿಯೊಡೆದು ಕಾಂಗ್ರೆಸ್ ಕಾರ್ಯಕರ್ತರು ಬ್ರಿಟಿಶ್ ಯುದ್ಧ ಪ್ರಯತ್ನಗಳ ವಿರುದ್ಧ ತಮಗೆ ಸಾಧ್ಯವಿದ್ದುದನ್ನೆಲ್ಲಾ ಮಾಡಿದರು ಎಂಬುದು ನಿಜ. "ಕ್ವಿಟ್ ಇಂಡಿಯಾ" ಮತ್ತು "ಮಾಡು ಇಲ್ಲವೆ ಮಡಿ" ಯಲ್ಲಿ ಸಾವಿರಾರು ಜನ ಜೈಲು ಅನುಭವಿಸಿದ್ದಲ್ಲದೆ ಹತ್ತು ಸಾವಿರದಷ್ಟು ಜನ ಪ್ರಾಣ ಕಳೆದುಕೊಂಡರು ಎಂದು ಹೇಳಲಾಗಿದೆ. ಇಂತಹ ಯುದ್ಧ ವಿರೋಧೀ ಚಟುವಟಿಕೆಗಳು, ನಮ್ಮ ಪ್ರಕಾರ, ಜಾಗತಿಕ ಫ್ಯಾಸಿಸಂ ವಿರುದ್ಧ ವಿಮೋಚನಾ ಯುದ್ಧದ ಧ್ಯೇಯೋದ್ದೇಶಗಳಿಗೆ ಕೆಡುಕುಂಟುಮಾಡಿತೆಂದು ಸಿದ್ಧವಾದರೂ ಕೂಡಾ 1942-43 ರ ಈ ಸಮರಶೀಲ ಕಾರ್ಯಕರ್ತರ ಬಲಿದಾನಗಳನ್ನು ಮತ್ತು ಅದರ ಹಿಂದಿನ ಸ್ಫೂರ್ತಿಯನ್ನು ಪ್ರಶ್ನಿಸುವ ಧೈರ್ಯವನ್ನು ಯಾರೂ ಮಾಡುವುದಿಲ್ಲ.

ಆದರೆ ನಾವು ಚರ್ಚಿಸುತ್ತಿರುವ ಪ್ರಶ್ನೆ 1942 ರ ಹೋರಾಟದಲ್ಲಿ ಹುತಾತ್ಮರು ಎಷ್ಟಿದ್ದರು ಎಂಬುದಲ್ಲ. ಹುತಾತ್ಮರ ಸಂಖ್ಯೆಯಿಂದಲೇ ಯಾವುದಾದರೂ ನಿರ್ಧಾರಕ್ಕೆ ಬರುವುದು ಸಾಧ್ಯವಿದ್ದರೆ ನಾವು ಕಮ್ಯುನಿಸ್ಟರ ಬಲಿದಾನಗಳ ಮಹಾನ್ ದಾಖಲೆಗಳನ್ನು ಉದಾಹರಿಸಿ ವಾಗ್ವಾದವನ್ನು ಮುಕ್ತಾಯ ಮಾಡಬಹುದು.

"ಮಾಡು ಇಲ್ಲವೆ ಮಡಿ" ಹೋರಾಟವನ್ನು ಒಂದು ವರ್ಷದೊಳಗೇ ಮಡಿಯಲು ಬಿಡಲಾಯಿತು. ಜತೆಗೆ ಇಂತಹ ಹೋರಾಟವೊಂದರ ರಾಜಕೀಯ ಪರಿಣಾಮಗಳೆಲ್ಲಾ ಇದ್ದೇ ಇದ್ದವು. ಮಹಾತ್ಮಾಗಾಂಧಿ ಮತ್ತು ವೈಸ್‌ರಾಯ್, ಗೃಹ ಕಾರ್ಯದರ್ಶಿ ರಿಚರ್ಡ್ ಟೋಟೆನ್‌ಹೇಮ್, ಮ್ಯಾಕ್ಸ್‌ವೆಲ್ ಮತ್ತು ಬ್ರಿಟಿಶ್ ಪ್ರಧಾನ ಮಂತ್ರಿ ವಿನ್‌ಸ್ಟನ್ ಚರ್ಚಿಲ್, ಲಾರ್ಡ್ ಅಮೆರಿ ಇತ್ಯಾದಿಯವರೂ ಸೇರಿದಂತೆ ಇತರ ಹಲವರ ನಡುವಿನ ಪತ್ರ ವ್ಯವಹಾರಗಳ ಕಂತೆ ಮುಂದುವರಿಯಿತು. ಇವುಗಳಲ್ಲಿ ಹೆಚ್ಚಿನ ಪತ್ರಗಳು ಭಾರತೀಯ ಸ್ವಾತಂತ್ರ್ಯದ ಘೋಷಣೆಯ ಒತ್ತಾಯವನ್ನು ಪುನರುಚ್ಚರಿಸುತ್ತಿದ್ದರೂ, ಜತೆಗೇ ಬ್ರಿಟಿಶ್ ಸರಕಾರದೆದುರು ಹಲ್ಲುಗಿಂಜುವಂತಹ ಹಲವು ಹೇಳಿಕೆಗಳನ್ನೂ ಅವುಗಳಲ್ಲಿ ಕಾಣಬಹುದಾಗಿದೆ.

(ಮುಂದುವರಿಯುತ್ತದೆ)

ಜೂನ್ ಹನ್ನೊಂದರ ಪಿಕೆಟಿಂಗ್ ವರದಿಗಳು

ಹುಬ್ಬಳ್ಳಿ

ಮಂಗಳೂರಿನಲ್ಲಿ ಸೇರಿದ ಸಿ. ಐ. ಟಿ. ಯು. ರಾಜ್ಯ ಸಮಿತಿಯ ನಾಲ್ಕನೆಯ ಸಮ್ಮೇಳನದಲ್ಲಿ ರಾಜ್ಯ ಸಮಿತಿಯು 26 ಉದ್ಯಮಗಳಲ್ಲಿ ದುಡಿಯುತ್ತಿರುವ ಸುಮಾರು 70 ಲಕ್ಷ ಕಾರ್ಮಿಕರಿಗೆ ಕನಿಷ್ಠ ವೇತನವನ್ನು ಜಾರಿಗೊಳಿಸುವಂತೆ ರಾಜ್ಯ ಸರ್ಕಾರವನ್ನು ಒತ್ತಾಯಿಸಿ ಹಾಗೂ ರೈತರು ಬೆಳೆದ ಬೆಳೆಗೆ ಲಾಭದಾಯಕ ಬೆಲೆಯನ್ನು ಗೊತ್ತುಪಡಿಸುವಂತೆ, ವಸತಿ ರಹಿತ ಬಡ ಕೂಲಿಗಾರರಿಗೆ ನಿವೇಶನ ಒದಗಿಸಿಕೊಡುವಂತೆ ಸಾಗುವಳಿ ಮಾಡುತ್ತಿರುವ ಬಡ ರೈತರಿಗೆ ಪಟ್ಟಾ ಕೊಡುವಂತೆ, ಕೃಷಿ ಕೂಲಿಕಾರರಿಗೆ ಕನಿಷ್ಠ ದಿನಗೂಲಿಯನ್ನು ಗೊತ್ತುಪಡಿಸುವಂತೆ, ಪದವೀಧರ ಯುವಕರಿಗೆ ಖಾಯಂ ಉದ್ಯೋಗ ಒದಗಿಸಿಕೊಡುವಂತೆ ಹೀಗೆ ಹಲವಾರು ಬೇಡಿಕೆಗಳನ್ನು ಮುಂದಿಟ್ಟು ಸಿ. ಐ. ಟಿ. ಯು. ಸಂಯೋಜಿತ ಕಾರ್ಮಿಕ ಸಂಘಟನೆಗಳಿಗೆ ಜೂನ್ 11 ರಂದು ಒಂದು ದಿನದ ಮುಷ್ಕರಕ್ಕೆ ಕರೆ ಕೊಟ್ಟಿತ್ತು. ಆ ಕರೆಯ ಮೇರೆಗೆ ಹುಬ್ಬಳ್ಳಿಯಲ್ಲಿ ಮೈಸೂರು ಕಿರ್ಲೋಸ್ಕರ್ (ಹುಬ್ಬಳ್ಳಿ—ಸತ್ತೂರ), ಸುಂದತ್ತಾ, ಬಿ.ಡಿ.ಕೆ. ಅಲಾಯ್ ಕೆಲಸಗಾರರು ಕೆಲಸದಿಂದ ಹೊರಗುಳಿದು ಮುಷ್ಕರವನ್ನು ಯಶಸ್ವಿಗೊಳಿಸಿದರು. ಅಂದು ಇಂಡಸ್ಟ್ರಿಯಲ್ ಎಸ್ಟೇಟಿನಲ್ಲಿ ಸಣ್ಣ-ಸಣ್ಣ ಉದ್ಯಮಗಳಲ್ಲಿ ದುಡಿಯುತ್ತಿರುವ ಸುಮಾರು 2500 ಕೆಲಸಗಾರರು ಕೆಲಸದಿಂದ ಹೊರಗೆ ಬಂದು ಮುಷ್ಕರದಲ್ಲಿ ಭಾಗವಹಿಸಿದರು. ಕೊನೆಗೆ ಮೈಸೂರು ಕಿರ್ಲೋಸ್ಕರ್ ಕಂಪನಿಯ ಎದುರು ನಡೆದ ಬಹಿರಂಗ ಸಭೆಯಲ್ಲಿ ಮಾತನಾಡಿದ ಕಾ. ಶಿರಪೂರ ಮತ್ತು ಪ್ರಧಾನ ಕಾರ್ಯದರ್ಶಿ ವಿ. ಎಂ. ಪೂಜಾರ ಇವರು ರಾಜ್ಯ ಸಮಿತಿಯ ಕಾರ್ಮಿಕ ವಿರೋಧಿ, ರೈತವಿರೋಧಿ ನೀತಿಯನ್ನು ಬಲವಾಗಿ ಖಂಡಿಸಿದರು. ಹಾಗೂ ಅಸಂಘಟಿತ ಕೆಲಸ ಗಾರರ ಸ್ಥಿತಿ ಗತಿಗಳನ್ನು ವಿವರಿಸಿ ಹೇಳಿ ಈ ಮುಷ್ಕರವು ನೇರವಾಗಿ ಅಸಂಘಟಿತ ಕೆಲಸಗಾರರ ಮತ್ತು ರೈತಸಂಘದ ಬೇಡಿಕೆಗಳಿಗಾಗಿ ಬೆಂಬಲ ಕೊಡುವ ಸಲುವಾಗಿ ನಡೆಸಲಾಗಿದೆ ಎಂದು ತಿಳಿಸಿದರು.

ಚಿಕ್ಕಮಗಳೂರು

ಕರ್ನಾಟಕ ಪ್ರಾಂತ ರೈತ ಸಂಘ ಕೊಟ್ಟ ಕರೆಯ ಮೇರೆಗೆ, ರಾಜ್ಯಾದ್ಯಂತ ನಡೆದ ಪಿಕೆಟಿಂಗ್ ಕಾರ್ಯಕ್ರಮದ ಅಂಗವಾಗಿ ತಾರೀಖು 11-6-84 ರಂದು ಚಿಕ್ಕಮಗಳೂರು ಜಿಲ್ಲೆಯ ಕಳಸದಲ್ಲಿ ಸುಮಾರು 457ಕ್ಕೆ ಹೆಚ್ಚು ರೈತ, ಕಾರ್ಮಿಕರು ಸೇರಿ ಕಂದಾಯ ಇಲಾಖೆ ಆಫೀಸನ್ನು ಪಿಕೆಟಿಂಗ್ ಮಾಡಿದರು.

ಸಿ.ಐ.ಟಿ.ಯು.ವಿನ ಕಾರ್ಮಿಕರು ಆ ದಿನ ಕೆಲಸಕ್ಕೆ ಹೋಗದೆ ಮುಷ್ಕರ ಮಾಡಿ ಪಿಕೆಟಿಂಗ್‌ನಲ್ಲಿ ಭಾಗವಹಿಸಿದರು.

ಸರ್ಕಾರವು ಅತಿಶಯ ವಿಳಂಬ ಅನುಸರಿಸುತ್ತಿರುವುದು, ದರಖಾಸ್ತುದಾರರಿಗೆ ಬಹರ್ ಹುಕುಂ ಸಾಗುವಳಿದಾರರಿಗೆ ಹಕ್ಕು ಪತ್ರ ನೀಡಲು ಕ್ರಮ ವಹಿಸಿಲ್ಲವಾಗಿದೆ. ಕೇಂದ್ರ ಸರ್ಕಾರದ ಕಠಿಣ ಅರಣ್ಯ ಕಾನೂನು ನೆಪ ಹೇಳಿ ತನ್ನ ಜವಾಬ್ದಾರಿಯನ್ನು ವರ್ಗಾಯಿಸಿ ಕೈಕಟ್ಟಿಕೊಂಡು ಕುಳಿತುಕೊಳ್ಳುವಂತಾಗಿದೆ ಹತ್ತಾರು ವರ್ಷಗಳಿಂದಲೂ ಬಹರ ಹುಕುಂ ಜಮೀನನ್ನು ಸಾಗುವಳಿ ತೊಡಗಿದವರಾಗಿದ್ದರು ಅವರಿಗೆ ಹಕ್ಕುಪತ್ರ ಸಿಕ್ಕಿಲ್ಲವಾಗಿದೆ. ಗುತ್ತೇದಾರಿ ಬಂಡವಾಳಶಾಹಿಗಳ ಒತ್ತಾಯಕ್ಕೆ ಮಣಿದು ಕೃಷಿಯೋಗ್ಯ ಅರಣ್ಯ ಭೂಮಿಯಲ್ಲೂ ಅರಣ್ಯ ಬೆಳೆಸುವ (ನೀಲಗಿರಿ) ಕ್ರಮನಾಗಿ ಸಾಮಾಜಿಕ ಅರಣ್ಯವನ್ನು ವಿಸ್ತರಿಸುತ್ತಿದ್ದಾರೆ. ಇದರ ವಿರುದ್ಧ ಹಾಗೂ ಪೇಟೆ ಮತ್ತು ಪಟ್ಟಣಗಳಲ್ಲಿ ಮನೆ ಇಲ್ಲದವರಿಗೆ ಉಚಿತ ನಿವೇಶನವನ್ನು ಕೊಡಬೇಕೆಂದು ಕೃಷಿ ಕಾರ್ಮಿಕರಿಗೇ ಹಾಗೂ ತೋಟ ಕಾರ್ಮಿಕರಿಗೆ ಸರ್ಕಾರ ಕೂಡಲೇ ಕನಿಷ್ಟಕೂಲಿ ನಿಗಧಿ ಮಾಡಬೇಕೆಂದು ಒತ್ತಾಯಿಸಿ ಪಿಕೆಟಿಂಗ್ ನಡೆಯಿತು. ಇದರ ಮುಖಂಡತ್ವ ಕೆ. ಸುಕುಮಾರ್ ವಹಿಸಿದ್ದರು.

ದೊಡ್ಡಬಳ್ಳಾಪುರ

ಕರ್ನಾಟಕ ಪ್ರಾಂತ ರೈತ ಸಂಘದ ಆದೇಶದ ಮೇರೆಗೆ ದೊಡ್ಡಬಳ್ಳಾಪುರದಲ್ಲಿ ಜೂನ್ 11 ರಂದು ನೂರಾರು ಜನ ತಾಲ್ಲೂಕು ಕಛೇರಿ ಮುಂದೆ ಪಿಕೆಟಿಂಗ್ ನಡೆಸಿ, 296 ರೈತರು ಬಂಧನಕ್ಕೊಳಗಾದರು. ಅದಕ್ಕಿಂತ ಮುಂಚೆ ಮೆರವಣಿಗೆ ಹೊರಟು ಬಿ.ಡಿ.ಓ. ಅವರನ್ನು ಘೇರಾವೋ ಮಾಡಲಾಯಿತು. ಪಿಕೆಟಿಂಗಿಗೆ ಮುಂಚೆ ನಡೆದ ಸಭೆಯಲ್ಲಿ ರಾಮಭದ್ರಯ್ಯ. ಟಿ.ಎನ್. ಬಾಲಾಜಿ ಎಚ್. ಮುಗುವಾಳಪ್ಪ. ಮೊದಲಾದವರು ಭಾಷಣ ಮಾಡಿದರು.

ಮಂಡ್ಯ

ಮಂಡ್ಯ ಜಿಲ್ಲೆಯ ಕೆ. ಎಂ. ದೊಡ್ಡಿಯಲ್ಲಿರುವ ಚಾಮುಂಡೇಶ್ವರಿ ಸಕ್ಕರೆ ಕಾರ್ಖಾನೆಯ ಕಾರ್ಮಿಕರು ಮುಷ್ಕರ ನಡೆಸಿ, ರೈತರ, ಅಸಂಘಟಿತ ಕಾರ್ಮಿಕರ ಬೇಡಿಕೆಗಳಿಗೆ ಬೆಂಬಲ ನೀಡಿ ಮೆರವಣಿಗೆ, ಬಹಿರಂಗ ಸಭೆಗಳನ್ನು ನಡೆಸಿದರು. ಕಾರ್ಯಕ್ರಮದಲ್ಲಿ ರೈತರೂ ಕೃಷಿ ಕಾರ್ಮಿಕರು ಭಾಗವಹಿಸಿದ್ದರು.

ಗಂಗಾವತಿ

ಕರ್ನಾಟಕ ಪ್ರಾಂತ ರೈತ ಸಂಘ, ರಾಜ್ಯ ಸಮಿತಿಯ ಕರೆಯ ಮೇರೆಗೆ, ರಾಜ್ಯದ ರೈತ ಹಾಗೂ ಕೃಷಿ ಕಾರ್ಮಿಕರಿಗೆ ಸಂಬಂಧಿಸಿದ ನಲ್ವತ್ತು ಮುಖ್ಯ ಬೇಡಿಕೆಗಳನ್ನು ಅದರಲ್ಲಿ ಮುಖ್ಯವಾಗಿ ವಸತಿ, ಬಂಜರು ಭೂಮಿ' ಹಾಗೂ ಅರಣ್ಯ ಭೂಮಿಯನ್ನು ಕೃಷಿ ಕಾರ್ಮಿಕ ಬಡರೈತರಿಗೆ ಹಂಚಲು, ಒತ್ತಾಯಿಸಿ ಜೂನ್ ಹನ್ನೊಂದರಂದು ರಾಜ್ಯಾದ್ಯಂತ ಸರಕಾರಿ ಛೇರಿಗಳನ್ನು ಪಿಕೆಟಿಂಗ್ ನಡೆಸಲು ಕರೆಕೊಟ್ಟ ಮೇರೆಗೆ, ಗಂಗಾವತಿ ತಾಲ್ಲೂಕು ಕೃಷಿ ಕಾರ್ಮಿಕರಿಗೆ 5000, ಕರಪತ್ರಗಳನ್ನು ಹಾಕಿಸಿ ಪ್ರಚಾರಮಾಡಲಾಗಿ, 3000, ಕೃಷಿ ಕಾರ್ಮಿಕರು, ಸಾವಿರಾರು ಮಹಿಳೆಯರೂ ಸೇರಿದ ಮೆರವಣಿಗೆ ತಹಸೀಲ ಕಛೇರಿಯನ್ನು ಯಶಸ್ವಿಯಾಗಿ ಪಿಕೆಟಿಂಗ್ ಮಾಡಿದಾಗ, ಪೋಲಿಸರು 200, ಜನರನ್ನು ಮಾತ್ರ ಬಂಧಿಸಿ ನಂತರ ಬಿಡುಗಡೆಮಾಡಿದರು.

ಸಾಯಂಕಾಲ ಗಾಂಧಿ ಚೌಕದಲ್ಲಿ ಬಹಿರಂಗ ಸಭೆಯನ್ನು ನಡೆಸಲಾಯಿತು.

(6ನೇ ಪುಟದಿಂದ)

ಬಿಂದ್ರನ್‌ವಾಲೆ ಜೊತೆಯಲ್ಲಿ ಸ್ನೇಹ ಬೆಳೆಸುವ ಸಲುವಾಗಿ ಪಿ ಎಸ್. ಬಿಂದರ್ ಅವರನ್ನು ದಿಲ್ಲಿಯಿಂದ ಪಂಜಾಬಿಗೆ ಕಳುಹಿಸಿರುವುದು ನಿಜ ಸಂಗತಿಯಲ್ಲವೇ ? ತೀವ್ರಗಾಮಿಗಳೊಡನೆ ಅನೇಕ ಅಧಿಕಾರಿಗಳ ಸಂಬಂಧವಿತ್ತೆಂದೂ, ಎಷ್ಟೋ ಸಲ ಜನರೇ ಮಧ್ಯೆ ಪ್ರವೇಶ ಮಾಡಿ ತೀವ್ರಗಾಮಿಗಳನ್ನು ಪೋಲೀಸರಿಗೆ ಒಪ್ಪಿಸಿದಾಗ ಯಾವ ಕ್ರಮವನ್ನೂ ಕೈಗೊಂಡಿಲ್ಲೆಂಬ ಸಂಗತಿ ಸರಕಾರಕ್ಕೆ ತಿಳಿದಿಲ್ಲವೇ ? ಕೇಂದ್ರ ಮುಖಂಡರ ವಿನಂತಿ ಮೇರೆಗೆ ಬಿಂದ್ರನ್‌ವಾಲೆ ಅವರ ಮುಖ್ಯ ಸಂಗಾತಿಯನ್ನು ಬಿಡುಗಡೆ ಮಾಡಿದ್ದು ನಿಜವಲ್ಲವೇ ? ಅಕಾಲಿಗಳ ವಿರುದ್ಧ ಹೋರಾಡಲು ಬಿಂದ್ರನ್‌ವಾಲೆಗೆ ಬೆಂಬಲ ನೀಡಿರುವುದು ಕಾಂಗ್ರೆಸ್ ಪಕ್ಷವೇ ಅಲ್ಲವೇ ?

ದಲ್ ಖಾಲಸಾವನ್ನು ಯಾರು ಸೃಷ್ಟಿಸಿದರು ? ಸಶಸ್ತ್ರ ಜನರೊಡನೆ ಬಿಂದ್ರನ್‌ವಾಲೆ ಮುಂಬಯಿ ಮತ್ತು ದಿಲ್ಲಿ ಸಂದರ್ಶಿಸಿದಾಗ ಯಾರ ಲೈಸೆನ್ಸ್ ರದ್ದು ಮಾಡಲಾಯಿತು, ಮುಂಬಯಿ ಮತ್ತು ದಿಲ್ಲಿಯಲ್ಲಿ ಅವರನ್ನು ಸ್ವಾಗತಿಸಿದವರಾರು ? ತೀವ್ರಗಾಮಿಗಳ ಒತ್ತಾಯಕ್ಕೆ ಮಣಿದು ಅಕಾಲಿಗಳು ಸಂವಿಧಾನದ 25 ನೆಯ ಕಲಮಿನ ವಿರುದ್ಧ ಚಳುವಳಿ ಹೂಡಿದಾಗ, ಇಡೀ ರಾಜಕೀಯವನ್ನೇ ಅದು ಜಾತೀಯವಾದಿಯಾಗಿ ಪರಿವರ್ತಿಸುತ್ತದೆಂದು ಹೇಳಿ ಲೋಕಸಭೆ ಸರ್ವಾನುಮತದಿಂದ ಆ ಚಳುವಳಿಯನ್ನು ಖಂಡಿಸಿದಾಗ, ವಿರೋಧ ಪಕ್ಷಗಳನ್ನು ವಿಶ್ವಾಸದಲ್ಲಿ ತೆಗೆದು ಕೊಳ್ಳದೆ 25 ನೆಯ ಕಲಮನ್ನು ತಿದ್ದುಪಡಿ ಮಾಡಲಾಗುವುದೆಂದು ಹೇಳಿದವರು ಪ್ರಧಾನ ಮಂತ್ರಿ ಮತ್ತು ಗೃಹಮಂತ್ರಿಗಳಲ್ಲವೇ ?

(ಮುಂದುವರಿಯುತ್ತದೆ)

(2ನೇ ಪುಟದಿಂದ)

ಕೃಷಿ ಸಮಿತಿಗೆ ಮನವಿ

ಯಾಗಿ ಕೆಜಿ ಒಂದಕ್ಕೆ 50 ರೂಗಳಂತೆ ಮಾರಾಟವಾಗುತ್ತಿದೆ ಒಂದು ಪೈಸೆ ಬೆಲೆಯ ಆಸಿಡ್ದ ಔಷದ 1 ರೂ-90ಪೈ ಮಾರಾಟವಾಗುತ್ತಿದೆ ಹೀಗಿದ್ದೂ ರೈತರು ಬೆಳೆದ ಬೆಳೆಗಳು ಔದ್ಯೋಗಿಕ ವಸ್ತುಗಳ ಸಮಾನ ಬೆಲೆಗೆ ಮಾರಾಟವಾಗದಿರುವುದಕ್ಕೆ ಕೇಂದ್ರ ಸರ್ಕಾರದ ಬ್ಯಾಂಕ್ ಮತ್ತು [ವಾಣಿಜ್ಯ ಸಂಸ್ಥೆಗಳ ಮೇಲಿನ ಹಿಡಿತವೇ ಮುಖ್ಯಕಾರಣವಾಗಿದ್ದು ಇದು ಪಟ್ಟಣದ ಕಾರ್ಮಿಕರ, ಸರ್ಕಾರಿ ನೌಕರರ ಕೃಷಿ ಕೂಲಿಗಾರರ ಹಿತರಕ್ಷಿಸುವಲ್ಲಿ ತೆಗೆದುಕೊಂಡ ತೀರ್ಮಾನಗಳಾಗಿವೆ ಎಂತ ಆಗಾಗ್ಗ ಕೇಳಿಬರುತ್ತಿದೆ ಹಾಗಾದರೆ ಈ ಜನರ ರಕ್ಷಣೆ ಮಾಡುವ ಆಹಾರ ಧಾನ್ಯಗಳನ್ನ ಪುಕ್ಕಟೆಯಾಗಿ ಹಂಚಿದರೆ ಇವರೆಲ್ಲಾ ಸುಭಿಕ್ಷವಾಗುತ್ತಾರೆಯೇ ಎಂದು ಯೋಚಿಸಬೇಕಾಗಿದೆ. ದೇಶದ ಸಮಗ್ರ ಜನತೆಗೆ ಒಳ್ಳೆಯದಾಗಲು ದೇಶದ ಔದ್ಯೋಗಿಕ ಉತ್ಪನ್ನಗಳು ಹೆಚ್ಚುವಂತೆ ಹೊಸ ಹೊಸ ಕಾರ್ಖಾನೆಗಳನ್ನ ತೆರೆದು ಇನ್ನೂ ಪ್ರಗತಿಪರವಾದಂಥ ಎಷ್ಟೋ ಕೆಲಸಗಳನ್ನ ಮಾಡುವುದರಿಂದ ಮಾತ್ರ ಸಾಧ್ಯವಾಗುತ್ತದೆ. ಈ ಬಗ್ಗೆ ನಾವು ತಮ್ಮಗಳ ಗಮನಕ್ಕೆ ಹೆಚ್ಚು ವಿಚಾರಗಳನ್ನ ತರಲು ಇಚ್ಛಿಸುವುದಿಲ್ಲ. ದೇಶದ ಶೇ 85 ರಷ್ಟು ಇರತಕ್ಕ ರೈತ ವರ್ಗದಲ್ಲಿ ಶೇ 15 ರಷ್ಟು ಇರುವ ಭೂ ಮಾಲಿಕರ ಕೈಯಲ್ಲಿ ಶೇ 50 ಕ್ಕೂ ಹೆಚ್ಚು ಭಾಗ ಜಮೀನು ಕೇಂದ್ರಿಕೃತವಾಗಿರುವುದು ಮತ್ತು ಇವರುಗಳು ಬಹು ಜಮೀನನ್ನು ಪಾಳು ಬಿಟ್ಟಿರುವುದು ಶೇ 85 ಬಡ ರೈತರು ಶೇ 50 ರಷ್ಟು ತುಂಡು ಭೂಮಿಗಳನ್ನು ತಮ್ಮ ಕೈಯಲ್ಲಿ ಇಟ್ಟುಕೊಂಡು ವ್ಯವಸಾಯವನ್ನು ಸರ್ಕಾರದ ನೀತಿಯಿಂದಾಗಿ ಚೆನ್ನಾಗಿ ಮಾಡಲಾಗುತ್ತಿಲ್ಲ.

ಭೂಮಿಯ ಮೇಲಿನ ಆದಾಯ ಮತ್ತು ಖರ್ಚುಗಳನ್ನ ಈ ಭೂಮಿಯನ್ನೇ ಜೀವನಾಧಾರವಾಗಿ ಇಟ್ಟುಕೊಂಡಿರುವ ರೈತನ ಇಡೀ ಕುಟುಂಬದ ಖರ್ಚನ್ನು ಅವನು ಹೊಂದಿರುವ ಜಮೀನಿನ ಆದಾಯಗಳನ್ನು ತುಲನೆ ಮಾಡಬೇಕಲ್ಲದೆ ಜಮೀನುಗಳಿಗೆ ಕೂಲಿ, ಗೊಬ್ಬರ ವಗೈರೆ ಖರ್ಚು ಇದರಿಂದ ಬಂದ ಧಾನ್ಯದ ಬೆಲೆ ಇಷ್ಟನ್ನೇ ಲೆಕ್ಕಕ್ಕೆ ತೆಗೆದುಕೊಂಡರೆ ಯಾವ ರೀತಿಯಿಂದಲೂ ಸಾಮಾಜಿಕ ನ್ಯಾಯವಾಗಲಾರದು. ಕಳೆದ ನೂರು ವರ್ಷಗಳಲ್ಲಿ ನಮ್ಮ ಜಿಲ್ಲೆಯಲ್ಲಿ ಒಂದು ವರ್ಷ ಮಾತ್ರವೇ ಮಳೆಬೆಳೆ ಚೆನ್ನಾಗಿತ್ತೆಂದು ಸರ್ಕಾರದ ವರದಿ ತಿಳಿಸುತ್ತದೆ.

ಈ ಮೇಲಿನ ಎಲ್ಲಾ ಅಂಶಗಳನ್ನೂ ತಾವು ಗಮನದಲ್ಲಿಟ್ಟುಕೊಂಡು ಕೈಗಾರಿಕಾ ವಸ್ತುಗಳ ಬೆಲೆ ಮಟ್ಟಕ್ಕೆ ಮತ್ತು ಬೆಲೆ ಸೂಚ್ಯಂಕಗಳ ಏರಿಕೆಗೆ ಅನುಗುಣವಾಗಿ ಕೃಷಿ ಉತ್ಪನ್ನಗಳ ಬೆಲೆಯೂ ಇರುವಂತೆ ನೋಡಿಕೊಳ್ಳುವುದು ಅತ್ಯವಶ್ಯಕವೆಂದು ಸರ್ಕಾರಕ್ಕೆ ಶಿಫಾರಸ್ಸು ಮಾಡಲು ವಿನಂತಿಸಿಕೊಳ್ಳುತ್ತೇವೆ.

ಕಾ| ಟಿ. ಕೆ. ಗೋವಿಂದರಾಜು
ಕಾ| ಪಂಡಿತ್ ದಾಸಪ್ಪ
ಕಾ| ಎಚ್. ಸಿ. ಚನ್ನಪ್ಪ
ಪದಾಧಿಕಾರಿಗಳು

ಶಿವಮೊಗ್ಗ

ಜುಲೈ 9 ರಿಂದ ಅಕ್ಕಿಗಿರಣಿ ಕಾರ್ಮಿಕರ ಮುಷ್ಕರ

ಶಿವಮೊಗ್ಗದ ಅಕ್ಕಿಗಿರಣಿ ಕೆಲಸಗಾರರ ಮತ್ತು ಹಮಾಲಿ ಕಾರ್ಮಿಕರ ಸಂಘವು ಅಕ್ಕಿಗಿರಣಿಗಳಲ್ಲಿ ದುಡಿಯುತ್ತಿರುವ ಕಾರ್ಮಿಕರ ಬೇಡಿಕೆಗಳ ಕುರಿತು ಅಕ್ಕಿ ಗಿರಣಿ ಮಾಲೀಕರುಗಳಿಗೆ ಮನವಿ ಕಳುಹಿಸಿ 16 ತಿಂಗಳುಗಳು ಕಳೆದಿದ್ದರೂ ಕೂಡ ಮಾಲೀಕರು ವಿವಿಧ ನೆಪಗಳನ್ನು ಮುಂದೊಡ್ಡಿ ಯಾವುದೇ ತೀರ್ಮಾನಕ್ಕೆ ಬರಲು ನಿರಾಕರಿಸುತ್ತಿದ್ದಾರೆ.

23 6·84 ರಂದು ಸೇರಿದ ಕಾರ್ಮಿಕರ ಸಂಘದ ಕಾರ್ಯಕಾರೀ ಸಮಿತಿ ಮೇಲ್ಕಂಡ ವಿಚಾರಗಳನ್ನು ಚರ್ಚಿಸಿ ಕಾರ್ಮಿಕರಿಗೆ ನ್ಯಾಯ ದೊರಕಲು ಹೋರಾಟವೊಂದೇ ದಾರಿಯೆಂಬ ತೀರ್ಮಾನಕ್ಕೆ ಬಂದಿದೆ. ಆ ಪ್ರಕಾರ 8·7·84 ರೊಳಗೆ ಮಾಲೀಕರು ಬೇಡಿಕೆಗಳ ಬಗ್ಗೆ ತೀರ್ಮಾನಕ್ಕೆ ಬರದೇ ಹೋದರೆ 9·7·84 ರಿಂದ ಕಾರ್ಮಿಕರು ಅನಿರ್ದಿಷ್ಟ ಕಾಲ ಮುಷ್ಕರ ಹೂಡುವರೆಂದು ಸಂಘವು ತನ್ನ ಪ್ರಕಟನೆಯಲ್ಲಿ ತಿಳಿಸಿದೆ.

ಅಮೇರಿಕದಲ್ಲಿ ಅಣುಯುದ್ಧ ಸನ್ನಾಹ !

ಅಮೇರಿಕಾದ ಸಂಯುಕ್ತ ಸಂಸ್ಥಾನಗಳ [ಯು.ಎಸ್.ಎ.] ರೀಗನ್ ಸರಕಾರ 1984 ನೇ ವರ್ಷದಲ್ಲಿ 65 ಬಿಲಿಯ ಡಾಲರ್ (ರೂ 65,000 ಕೋಟಿ] ಅಣುಯುದ್ಧ ಸನ್ನಾಹಕ್ಕಾಗಿ ವೆಚ್ಚ ಮಾಡಲಿದೆ ಎಂದೂ, ಮುಂದಿನ 5 ವರ್ಷಗಳಲ್ಲಿ (1985-90) ಇದೇ ಉದ್ದೇಶಕ್ಕಾಗಿ ಇನ್ನೂ 450 ಬಿಲಿಯ ಡಾಲರ್ [ರೂ 450,000 ಕೋಟಿ] ವೆಚ್ಚ ಮಾಡಲಿದೆ ಎಂದೂ ವಾಷಿಂಗ್‌ಟನ್ ರಕ್ಷಣಾ ಸಮಾಚಾರ ಕೇಂದ್ರದಿಂದ ತಿಳಿದುಬಂದಿದೆ. ಅಂದರೆ, ಅಮೇರಿಕ ಇಷ್ಟರತನಕ ತನ್ನ ಒಟ್ಟು ರಕ್ಷಣಾ ವೆಚ್ಚದಲ್ಲಿ ಶೇ 10 ರಿಂದ 15 ರಷ್ಟು ಮಾತ್ರ ಅಣು ಅಸ್ತ್ರಗಳಿಗಾಗಿ ವೆಚ್ಚ ಮಾಡುತ್ತಿದ್ದು, ಇನ್ನು ಮುಂದೆ ಶೇ 22ರಷ್ಟು ಇದಕ್ಕಾಗಿ ವೆಚ್ಚ ಮಾಡಲಿದೆ. ಇನ್ನೊಂದು ದಶಕದಲ್ಲಿ ಅಮೇರಿಕವು 17000 ಹೊಸ ಅಣು ಅಸ್ತ್ರಗಳನ್ನು ಹೊಂದಲಿದೆ. ಈ ದಿಸೆಯಲ್ಲಿ ಅಲ್ಲಿನ 15 ಬೃಹತ್ ಅಣು ಅಸ್ತ್ರ ವ್ಯವಸ್ಥೆಗಳನ್ನು ಅಭಿವೃದ್ಧಿಗೊಳಿಸಲು, ಅಲ್ಲಿ ಅಣು ಅಸ್ತ್ರಗಳನ್ನು ಉತ್ಪಾದಿಸಲು, ಕೊಂಡುಕೊಳ್ಳಲು ಬೃಹತ್ ಪ್ರಮಾಣದಲ್ಲಿ ವೆಚ್ಚಮಾಡಲಿದೆ,

ಅಧ್ಯಕ್ಷ ರೀಗನ್‌ನ ಆಡಳಿತಾವಧಿಯಲ್ಲಿ ಅಣ್ವಸ್ತ್ರಗಳಿಗಾಗಿ ವೆಚ್ಚ ದ್ವಿಗುಣವಾಗುತ್ತಿದೆ. ಇತರ ಮಿಲಿಟರಿ ವೆಚ್ಚಕ್ಕಿಂತ ಅಣ್ವಸ್ತ್ರಗಳಿಗಾಗಿ ಆಗುವ ವೆಚ್ಚ ಹೆಚ್ಚು ತೀವ್ರಗತಿಯಲ್ಲಾಗುತ್ತಿದೆ. ಜೊತೆಗೇ, ಅಮೇರಿಕ ತನ್ನ ಅಂತರಿಕ್ಷ ನೌಕಾ ಕೇಂದ್ರಗಳನ್ನು ಮಿಲಿಟರಿ ಕಾರ್ಯಾಚರಣೆಗಳಿಗೆ ಬಳಸಲು ಬಯಸುತ್ತಿದ್ದು, ಅಂತರಿಕ್ಷ ಯುದ್ಧ ಸನ್ನಾಹದಲ್ಲಿಯೂ ತೊಡಗಿದೆ.

ಅಣು ಯುದ್ಧ ಸನ್ನಾಹಕ್ಕೆ ಸಂಬಂಧಿಸಿದ ಅಮೇರಿಕದ ಸುದ್ದಿ ಸಂಗ್ರಹ ಇಲಾಖೆಯೊಂದರಲ್ಲಿಯೇ ವಿಶ್ವದಾದ್ಯಂತ 150,000 ಸಿಬ್ಬಂದಿಗಳಿದ್ದಾರೆ. ಈ ಇಲಾಖೆಯ ವಾರ್ಷಿಕ ವೆಚ್ಚವೇ 15 ಬಿಲಿಯ ಡಾಲರ್ [ರೂ 15 000 ಕೋಟಿ] ಮೀರುವುದು. ಅಣು ಅಸ್ತ್ರಗಳಿಗೆ ಸಂಬಂಧಿಸಿದ ಸುದ್ದಿಗಳನ್ನು ವಿಶ್ವದಾದ್ಯಂತ ಸಂಗ್ರಹಿಸುವುದು, ವಿಶ್ಲೇಷಿಸುವುದು ಈ ಇಲಾಖೆಯ ಮುಖ್ಯ ಕರ್ತವ್ಯಗಳು. ಜೊತೆಗೇ ಅಮೇರಿಕ ವಿಶ್ವದಾದ್ಯಂತ ತನ್ನ ಅನೇಕ ಗುಪ್ತ ಮಿಲಿಟರಿ ಜಾಲಗಳನ್ನು ಬೀಸಿದೆ. ಇವುಗಳಿಗಾಗಿ ವರ್ಷಕ್ಕೆ 11 ಬಿಲಿಯ ಡಾಲರ್ (ರೂ 11 000 ಕೋಟಿ) ಖರ್ಚು ಮಾಡುತ್ತಿದೆ.

73 ಕೋಟಿ ಜನಸಂಖ್ಯೆ ಇರುವ ಅಭಿವೃದ್ಧಿ ಹೊಂದುತ್ತಿರುವ ಬಡ ಭಾರತದ 6ನೇ ಪಂಚವಾರ್ಷಿಕ ಯೋಜನೆಯ (1980-85) ಒಟ್ಟು ವೆಚ್ಚ ರೂ 158, 710 ಕೋಟಿ. ಆದರೆ, 22 ಕೋಟಿಯಷ್ಟೇ ಜನಸಂಖ್ಯೆ ಇರುವ ಅಮೇರಿಕದ 5 ವರ್ಷದ (1985-90) ಅಣು ಅಸ್ತ್ರಗಳ ವೆಚ್ಚವೇ ರೂ. 450 000 ಕೋಟಿ ಮತ್ತು ಒಟ್ಟು ರಕ್ಷಣಾ ವೆಚ್ಚ ಅದರ ನಾಲ್ಕುಪಾಲು ರೂ1800 000 ಕೋಟಿ ಅರ್ಥಾತ್, ಭಾರತದ 6ನೇ ಯೋಜನೆಯ ವೆಚ್ಚದ ಸುಮಾರು ಮೂರು ಪಾಲಿನಷ್ಟು ಅಮೇರಿಕ ಮುಂದಿನ 5 ವರ್ಷಗಳಲ್ಲಿ ಅಣು ಅಸ್ತ್ರ ಯುದ್ಧ ಸನ್ನಾಹಕ್ಕಾಗಿಯೇ ಖರ್ಚು ಮಾಡಲಿದೆ. ಹನ್ನೆರಡು ಪಾಲಿನಷ್ಟು ಒಟ್ಟು ರಕ್ಷಣಾ ಕಾರ್ಯಗಳಿಗೆ ಖರ್ಚು ಮಾಡಲಿದೆ.

ಅಮೇರಿಕ ಯಾಕೆ ರಕ್ಷಣೆಗಾಗಿ, ಅಣು ಅಸ್ತ್ರಗಳಿಗಾಗಿ ಇಷ್ಟೊಂದು ಸಂಪನ್ಮೂಲ ಪೋಲು ಮಾಡುತ್ತಿದೆ? ಎರಡನೇ ಜಾಗತಿಕ ಯುದ್ಧಾನಂತರ ಅಳಿದುಳಿದ ಸಾಮ್ರಾಜ್ಯಶಾಹಿಯನ್ನು ಉಳಿಸಿಕೊಳ್ಳುವುದು, ಅದರ ನಾಯಕತ್ವವನ್ನು ಮುಂದುವರಿಸಿಕೊಳ್ಳುವುದು ರಷ್ಯ, ಚೀನಾ, ಯೂರೋಪ್, ಕ್ಯೂಬಾ ಇಂಡೋಚೀನಾ ಮೊದಲಾದ ಸಮಾಜವಾದಿ ರಾಷ್ಟ್ರಗಳನ್ನು ಯುದ್ಧ ಭೀತಿಗೊಡ್ಡಿ ಅವುಗಳ ಆರ್ಥಿಕ ಪ್ರಗತಿಯನ್ನು ಕುಂಟಿಸುವುದು, ಸಾಮ್ರಾಜ್ಯಶಾಹಿಯಿಂದ ಸ್ವತಂತ್ರಗೊಂಡ ಏಷ್ಯಾ, ಆಫ್ರಿಕಾ, ಲ್ಯಾಟಿನ ಅಮೇರಿಕಾ ದೇಶಗಳ (ಮೂರನೇ ಜಗತ್ತು) ಆರ್ಥಿಕ ರಾಜಕೀಯ ಸಂಸ್ಕೃತಿ ವಿಷಯಗಳಲ್ಲಿ ಹಸ್ತಕ್ಷೇಪ ಮಾಡಿ ಅವುಗಳನ್ನು ಹೊಸ ವಸಾಹತುಗಳನ್ನಾಗಿ ಮಾರ್ಪಡಿಸುದಕ್ಕೂ, ಸಾಮ್ರಾಜ್ಯ ಶಾಹಿ ವ್ಯವಸ್ಥೆಯ ಆರ್ಥಿಕ ದುಸ್ಥಿತಿಗಳ ದುಷ್ಪರಿಣಾಮಗಳನ್ನು ಈ ರಾಷ್ಟ್ರಗಳ ಮೇಲೆ ಹೇರುವುದಕ್ಕು ಭಾರೀಪ್ರಮಾಣದ ಮಿಲಿಟರಿ, ಅಣು ಯುದ್ಧ ಸನ್ನಾಹ ಅಮೇರಿಕದಲ್ಲಿ ನಡೆಯುತ್ತಿದೆ. ಪರಿಣಾಮವಾಗಿ, 1972 ರಿಂದ ವಿಶ್ವದಾದ್ಯಂತ ಶಸ್ತ್ರಾಸ್ತ್ರಗಳ ಪೈಪೋಟಿ ಹೆಚ್ಚುತ್ತಿದ್ದು, ಜಗತ್ತಿನ ಒಟ್ಟು ಮಿಲಿಟರಿ ವೆಚ್ಚವು 1972 ರಲ್ಲಿ 300 ಬಿಲಿಯ ಡಾಲರ್ ದಿಂದ 1982 ರಲ್ಲಿ 820 ಬಿಲಿಯ ಡಾಲರ್ ಸೇರಿ 1985 ರಷ್ಟರಲ್ಲಿ 1000 ಬಿಲಿಯ ಡಾಲರ್ ಗೆ (ರೂ 1000,000 ಕೋಟಿ] ಮೀರಲಿದೆ! ಇಷ್ಟು ಸಂಪನ್ಮೂಲ ಜಾಗತಿಕ ಆರ್ಥಿಕ ಅಭಿವೃದ್ಧಿಗೆ ಸಿಗದಾಗಿದೆ.

ಅಣುಯುದ್ಧದ ವಿರೋಧವಾಗಿ, ಅಂತರಿಕ್ಷ ಯುದ್ಧದ ವಿರೋಧವಾಗಿ, ಸಂಪೂರ್ಣ ನಿಶ್ಶಸ್ತ್ರೀಕರಣಕ್ಕಾಗಿ ಜಗತ್ತಿನಾದ್ಯಂತ, ಅಮೇರಿಕ, ಪಶ್ಚಿಮಯುರೋಪ್, ಜಪಾನ್ ಇಂತಹ ಸಾಮ್ರಾಜ್ಯಶಾಹಿ ದೇಶಗಳಲ್ಲಿಯೂ ಪ್ರಬಲವಾದ ಜನತಾ ಚಳುವಳಿಗಳು ನಡೆಯುತ್ತವೆ.

ಬಡತನ, ನಿರುದ್ಯೋಗ, ಅನಾರೋಗ್ಯ. ಅನಕ್ಷರತೆ, ಬೆಲೆಏರಿಕೆ, ಹಣದುಬ್ಬರಗಳನ್ನು ಹೋಗಲಾಡಿಸಲು ಆರ್ಥಿಕ ಸಂಪನ್ಮೂಲಗಳನ್ನು ಬಳಸಬೇಕೆಂದು ಒತ್ತಾಯಿಸಲಾಗುತ್ತಿದೆ. ಜಾಗತಿಕ ಶಾಂತಿ ಹೋರಾಟಕ್ಕೆ ಜಯವಾಗಲಿ ಮಾನವ ಕೋಟಿ ಯುದ್ಧ ಮತ್ತು ಸರ್ವನಾಶಗಳಿಂದ ಪಾರಾಗಲಿ. ಸೋವಿಯತ್ ಯೂನಿಯನ್ ಮತ್ತಿತರ ಸಮಾಜವಾದಿ ರಾಷ್ಟ್ರಗಳ ಹಾಗೂ ಭಾರತವೂ ಸೇರಿದಂತೆ ಮೂರನೇ ಜಗತ್ತಿನ ರಾಷ್ಟ್ರಗಳ ಜಾಗತಿಕ ಶಾಂತಿ ಆಂದೋಳನವು ಯಶಸ್ವಿಯಾಗಲಿ.

— ಆರ್. ಚಂದ್ರ

[1ನೇ ಪುಟದಿಂದ]

ಪ್ರಚೋದಾತ್ಮಕ ಮನೋಭಾವ ತೋರಿದರೆ, ಅದು ನಮ್ಮ ಜನರ ಐಕ್ಯತೆಗೆ ತೀವ್ರ ಅಪಾಯ ಉಂಟು ಮಾಡುತ್ತದೆ, ಮತ್ತು ನಮ್ಮ ದೇಶವನ್ನು ವಿಭಜಿಸಲು ಆತುರರಾಗಿರುವ ಸಾಮ್ರಾಜ್ಯಶಾಹಿಗಳ ಒಳಸಂಚಿಗೆ ಸಹಾಯಕವಾಗುತ್ತದೆ.

ಸಿಖ್ ಜನತೆಯ ಮೇಲೆ ಉಂಟಾಗಿರುವ ನೋಯಿಸಲ್ಪಟ್ಟಿರುವ ಭಾವನೆಗಳನ್ನು ಶಮನಗೊಳಿಸಲು, ಪಂಜಾಬಿನಲ್ಲಿ ಎರಡು ಜಾತಿಗಳೊಳಗೆ ಸರ್ವಸಾಧಾರಣ ಒಗ್ಗಟ್ಟಿನ ಮನೋಭಾವ ಪುನರ್‌ಸ್ಥಾಪಿಸಲು ಮತ್ತು ಕಳೆದ ಕೆಲವು ತಿಂಗಳುಗಳಿಂದ ರಾಕ್ಷಸೀ ರೂಪದಲ್ಲಿ ನಡೆಯುತ್ತಿದ್ದ ಘಟನೆಗಳನ್ನು ಮರೆಯುವಂತೆ ಮಾಡಲು ಎಲ್ಲ ಶಕ್ತಿಗಳೂ ಸರ್ವಪ್ರಯತ್ನ ಮಾಡುವುದು ಅತ್ಯಗತ್ಯ.

ರಾಷ್ಟ್ರ ವಿರೋಧಿ ಚಟುವಟಿಕೆಗಳಿಗೆ ಧಾರ್ಮಿಕ ಭಾವನೆಗಳ ಉಪಯೋಗ ಮಂದಿರದಲ್ಲಿ ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸಿದವರಿಂದ ಜನರ ಪಾವಿತ್ರ್ಯದ ಉಲ್ಲಂಘನೆ ಮೊದಲಾದ ನಿಜ ಸಂಗತಿಗಳ ಕುರಿತು ಸಿಖ್ ಜನತೆಗೆ ತಿಳುವಳಿಕೆ ನೀಡುವುದು ಅತ್ಯಗತ್ಯವೆಂದು ಕೇಂದ್ರ ಸಮಿತಿ ಅಭಿಪ್ರಾಯ ಪಡುತ್ತದೆ. ಪ್ರಾರ್ಥನೆಯ ಸ್ಥಳವನ್ನು ರಾಷ್ಟ್ರ ವಿರೋಧಿ ಮತ್ತು ಪೈಶಾಚಿಕ ಕೃತ್ಯಗಳಿಗಾಗಿ ಉಪಯೋಗಿಸಬಾರದೆಂಬುದನ್ನು ಎಲ್ಲ ಪ್ರಜಾಪ್ರಭುತ್ವ ಶಕ್ತಿಗಳು ಒಪ್ಪಿಕೊಳ್ಳಬೇಕಾಗುತ್ತದೆ.

ಸರಕಾರಕ್ಕೆ ಕೇಂದ್ರ ಸಮಿತಿಯ ಕರೆ

ಆದಷ್ಟು ತೀವ್ರ ಸಶಸ್ತ್ರ ಸೈನಿಕರನ್ನು ಸ್ವರ್ಣ ಮಂದಿರದಿಂದ ವಾಪಸ್ ಕರೆಸಿಕೊಳ್ಳಬೇಕು. ಸ್ವರ್ಣ ಮಂದಿರಕ್ಕೆ ಭಕ್ತರು ಬರುವಂತೆ ಮಾಡಲು, ಕಟ್ಟಡಕ್ಕೆ ರಿಪೇರಿ ನಡೆಸಲು, ಅನುಕೂಲವಾಗುವಂತೆ ಶಿರೋಮಣಿ ಗುರುದ್ವಾರ ಪ್ರಬಂಧಕ ಕಮಿಟಿಯ ತಾತ್ಕಾಲಿಕ ಅಧ್ಯಕ್ಷರ ಬೇಡಿಕೆಯನ್ನು ಮನ್ನಿಸಿ ಮಂದಿರದ ಆಡಳಿತೆಯನ್ನು ಅಕಲ್ ತಖ್ತ್‌ನ ಮುಖ್ಯ ಪುರೋಹಿತರ ಹಿರಿತನದಲ್ಲಿ ಐದು ಪುರೋಹಿತರಿಗೆ ಒಪ್ಪಿಸಿ ಕೊಡಬೇಕು.

ಪಂಜಾಬಿನಲ್ಲಿ ಶಾಂತ ಪರಿಸ್ಥಿತಿಯನ್ನು ಸ್ಥಾಪಿಸಬೇಕು.

ಪಂಜಾಬಿ ಜನರ ಪ್ರಜಾಪ್ರಭುತ್ವವಾದಿ ಬೇಡಿಕೆಗಳನ್ನು ಒಪ್ಪಿಕೊಂಡದ್ದೇನೆಂದು ಸಾರಬೇಕು, ನೀರಿನ ತಂಟೆಯನ್ನು ಸುಪ್ರೀಂಕೋರ್ಟಿನ ನ್ಯಾಯಾಧೀಶರಿಗೆ ಒಪ್ಪಿಸಬೇಕು, ಚಂಡೀಗಡವನ್ನು ಪಂಜಾಬಿಗೆ ಕೊಡಬೇಕು, ಹರಿಯಾಣಕ್ಕೆ ಕೆಲವು ಪ್ರದೇಶ ಹಸ್ತಾಂತರಿಸಬೇಕು, ಹೊಸ ರಾಜಧಾನಿ ಕಟ್ಟಲು ಆರ್ಥಿಕ ಸಹಾಯ ಒದಗಿಸಬೇಕು, ಪಂಜಾಬ್ ಮತ್ತು ಹರಿಯಾಣದ ಪ್ರಾದೇಶಿಕ ಬೇಡಿಕೆಗಳ ಕುರಿತು ವಿಚಾರ ಮಾಡಲು, ಭಾಷೆ ಮತ್ತು ಸಂಲಗ್ನತೆಯ ತಳಹದಿಯಲ್ಲಿ ಅದಕ್ಕೆ ಪರಿಹಾರ ಸೂಚಿಸಲು ಒಂದು ಕಮಿಟಿ ನೇಮಕ ಮಾಡಬೇಕು.

ಪಂಜಾಬಿನಲ್ಲಿಯ ಗಂಭೀರ ಪರಿಸ್ಥಿತಿಯನ್ನು, ವಿವರಿಸಲು ಜಾತೀಯ ಸೌಹಾರ್ದತೆಯನ್ನು ಕಾಪಾಡಿಕೊಂಡು ಹೋಗಲು, ಮೇಲಿನ ಬೇಡಿಕೆಗಳನ್ನು ಒಪ್ಪಿಕೊಳ್ಳಬೇಕೆಂದು ಕೇಂದ್ರ ಸಮಿತಿ ಒತ್ತಾಯಪಡಿಸುತ್ತದೆ. ಈ ಚಳುವಳಿಗೆ ಇತರ ಪ್ರಜಾಪ್ರಭುತ್ವವಾದಿ ಜನರ ಸಹಾಯ ಪಡೆಯಬೇಕು.

○

ಡಿ. ವೈ. ಎಫ್. ಐ. ಪ್ರತಿನಿಧಿಗಳ ಚೀನ ಪ್ರವಾಸ

ಆಲ್ ಚೈನಾ ಯೂತ್ ಫೆಡರೇಷನ್ನಿನ ಆಹ್ವಾನದ ಮೇರೆಗೆ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿ. ವೈ. ಎಫ್. ಐ.) ಕೇಂದ್ರ ಸಮಿತಿಯ ಪರವಾಗಿ ಸಂಸತ್ ಸದಸ್ಯ ಪ್ರಧಾನ ಕಾರ್ಯದರ್ಶಿ ಕಾ. ಹಾನನ್ ಮುಲ್ಲಾ ಅವರ ನಾಯಕತ್ವದಲ್ಲಿ ಅಧ್ಯಕ್ಷ ಎಂ. ವಿಜಯ ಕುಮಾರ್, ಉಪಾಧ್ಯಕ್ಷ ಇ. ಪಿ. ಜಯರಾಜನ್ ಸಹ ಕಾರ್ಯದರ್ಶಿ ಎಸ್. ಪಿ. ತಿವಾರಿ ಅವರುಗಳು 1984 ಜುಲೈ 2 ರಿಂದ 15 ದಿನಗಳ ಪ್ರವಾಸವನ್ನು ಕೈಗೊಳ್ಳಲಿದ್ದಾರೆ.

ಬ್ಯಾಕೋಡ ಗ್ರಾಮದಲ್ಲಿ ರೈತ ಸಂಘದ ಉದ್ಘಾಟನೆ

27-6-84 ರಂದು ಬಿಜಾಪುರ ಜಿಲ್ಲೆಯ, ಬಸವನ ಬಾಗೇವಾಡಿ ತಾಲ್ಲೂಕಿನ ಬ್ಯಾಕೋಡ ಗ್ರಾಮದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ಉಪಾಧ್ಯಕ್ಷರೂ ಜಿಲ್ಲಾ ರೈತ ಸಂಘದ ಅಧ್ಯಕ್ಷರೂ ಆದ ಕಾ| ಭೀಮಸಿ ಕಲಾದಗಿ ಅವರು ರೈತ ಸಂಘದ ಶಾಖೆಯನ್ನು ಉದ್ಘಾಟಿಸಿದರು. ಬಾಗೇವಾಡಿಯ ಭೂ ಅಭಿವೃದ್ಧಿ ಬ್ಯಾಂಕಿನ ಮಾಜೀ ಚೇರ್‌ಮನ್‌ರಾದ ಶ್ರೀ ಬಿ. ಎಲ್. ಪಾಟೀಲ್ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು.

ಅದೇ ದಿನ ಸಂಜೆ ನಡೆದ ಸಾರ್ವಜನಿಕ ಸಭೆಯ ಅಧ್ಯಕ್ಷತೆಯನ್ನು ಶ್ರೀ ಆರ್. ಎಂ. ನರಸಲಗಿ ವಹಿಸಿದ್ದರು.

ರೈತ ಸಂಘದ ನೂತನ ಘಟಕಕ್ಕೆ ಶ್ರೀ ನಾಗಣ್ಣಾ, ಹೊನ್ನಕೀರಪ್ಪ ಬಿರಾದಾರ ಅಧ್ಯಕ್ಷರಾಗಿಯೂ, ಶ್ರೀ ಹಣಮಂತರಾಯ ಚೆಂದಪ್ಪ ಹರನಾಳ ಉಪಾಧ್ಯಕ್ಷರಾಗಿಯೂ, ಶ್ರೀ ಶಿವಣ್ಣ ಯಮುನಪ್ಪ ವಗ್ಗರ, ಪ್ರಧಾನ ಕಾರ್ಯದರ್ಶಿಯಾಗಿಯೂ ಶ್ರೀ ಹುಸೇನ್ ಸಾಬ್ ಚಪ್ಪರ ಬಂದ ಸಹಕಾರ್ಯದರ್ಶಿಯಾಗಿಯೂ ಶ್ರೀ ನಿಂಗಯ್ಯಾ ರುದ್ರಯ್ಯಾ ಹಿರೇಮಠ ಖಜಾಂಚಿಯಾಗಿಯೂ ಆಯ್ಕೆಯಾಗಿದ್ದಾರೆ.

Printed & Publishedby P. Ramachandra Raoby him on behalf of the Communist Pary of India (Marxist) Karnataka State Co nmittee, K. V. Temple Street, Sultanpet, Bangalore-560053. Editorial and managerial office, L-56, K. V. Temple Street, Sultanpet. B-53. Phone : 24154
Editor : P. Ramachandra Rao Managing Editor : N. K. Upadhyaya